ಎರಡನೆಯದಾಗಿ ಅಮಾನುಷವಾದ ಆಹಾರ ಒದಗಿಸುತ್ತಾ ಇದೆ ಇತ್ಯಾದಿ, ಇತ್ಯಾದಿ ಎಂದು ಮಾನ್ಯ ಸದಸ್ಯರು ಹೇಳಿದರು. ಇದು ವಾಸ್ತವಾಂಶಕ್ಕೆ ವಿರೋಧವಾಗಿದೆ. ಸಾಮಾನ್ಯವಾಗಿ ಜೈಲಿಗೆ ಹೋಗಿರತಕ್ಕವರು ಜೈಲಿನಿಂದ ಹೊರಗೆ ಬಂದಮೇಲೆ ಅವರನ್ನು ನೋಡಿದರೆ ಅವರ ತೂಕ ಆಗಲಿ, ಅವರ ಆರೋಗ್ಯ ಆಗಲಿ ಹೊರಗಿರುವವರಿಗಿಂತಲೂ ಉತ್ತಮವಾಗಿರುವುದರಿಂದ ಈ ಆಪಾದನೆಗೆ ಆಧಾರವೇ ಇಲ್ಲ ಎಂದು ನಾನಾದರೂ ಹೇಳಬೇಕಾಗುತ್ತದೆ.

ಇನ್ನು 'ರಾಜಕೀಯ ಕೈದಿಗಳ ವಿಷಯ. ಹಿಂದೆ ಜೈಲಿಗೆ ಹೋಗಿದ್ದವರಿಗೆ ಅನುಭವ ಇದೆ. ಯಾವ ಯಾವ ಅನುಕೂಲಗಳು ಬೇಕೋ ಅವುಗಳನ್ನು ಉಪಯೋಗಿಸಿಕೊಳ್ಳಲು ಅವಕಾಶವಿದೆ, ಹೆಚ್ಚಾಗಿ ಹೇಳಬೇಕಾಗಿಲ್ಲ. ಈಗ ಅವರಿಗೆ ಏನೂ ತೊಂದರೆ ಆಗುತ್ತಾ ಇಲ್ಲ.

ಕಳ್ಳಭಟ್ಟಿ ಸಾರಾಯಿ ಇಳಿಸುವ under-trialsಗೆ ತೊಂದರೆಮಾಡುತ್ತಾ ಇದ್ದಾರೆ ಎಂದು ಹೇಳಿದರು. ಅದು ನಮ್ಮ ಗಮನಕ್ಕೆ ಬಂದಿಲ್ಲ. ಅಂಥಾದ್ದು ಬಂದರೆ ನರಿಪಡಿಸೋಣ.

ಕೈದಿಗಳಿಗೆ ಹೊಡೆಯುತ್ತಾರೆ ಎಂದು ಹೇಳಿದರು. Whipping Act ನಲ್ಲಿರುವುದು ಮಾನ್ಯ ಸದಸ್ಯರಿಗೆ ಗೊತ್ತೇ ಇದೆ. ಈ ಶಿಕ್ಷೆ ಮೊದಲೂ ಇತ್ತು. ಆದ್ದರಿಂದ ಆ ವಿಷಯದಲ್ಲೂ ಕೂಡ ಆಪಾದನೆ ನಿರಾಧಾರವಾದದ್ದು ಎಂದು ವಿನಂತಿಮಾಡಿಕೊಳ್ಳಬೇಕಾಗುತ್ತದೆ.

ಕೈಗಾರಿಕಾ ಕನಬುಗಳ ಏರ್ಪಾಡು ಮಾಡಿದೆ. ಇನ್ನೂ ಹೆಚ್ಚಾದ ರೀತಿಯಲ್ಲಿ ಸುಧಾರಿಸಬೇಕೆಂಬುದನ್ನು ಒಪ್ಪಿಕೊಳ್ಳುತ್ತೇನೆ. ಈಗ ಇಲ್ಲರತಕ್ಕ ಜೈಲು ನರಿಯಾದ ಸ್ಥಳದಲ್ಲಿ ಇಲ್ಲ. ನರಿಯಾದ ಅವಕಾಶವಿಲ್ಲದೆ ಇರುವುದರಿಂದ ಎಷ್ಟು ಬದಲಾವಣೆಮಾಡಬೇಕು ಎಂದಿದೆಯೋ ಅಷ್ಟು ಮಾಡುವುದಕ್ಕೆ ಆಗದೇ ಇರುವುದರಿಂದ ವಿಷಾದಪಡುತ್ತೇನೆ ಮತ್ತು ನರಿಪಡಿಸುವುದಕ್ಕೆ ಪ್ರಯತ್ನಪಡುತ್ತೇನೆ.

ಜೈಲು ಎನ್ನುವುದು ಒಂದು penal settlement ಆಗಿರಬಾರದು, it must be reformatory ಎಂಬ ತತ್ವವನ್ನು ಒಪ್ಪಿಕೊಳ್ಳುತ್ತೇನೆ.

ಕೊನೆಯದಾಗಿ ರೆಮಿಷ್ಷನ್ ವಿಷಯ ಹೇಳಿದರು. ರೆಮಿಷ್ಷನ್ ಕೊಡುತ್ತಾ ಇದೆ. ಕಾನೂನುಬದ್ಧವಾಗಿ ಕಾರ್ಪಸ್ಟಿಟ್ಯೂಷನಲ್ಲಿ ಯಾವ ಯಾವುದಕ್ಕೆ ಕೊಡಬೇಕೆಂದು ಹೇಳಿದೆಯೋ ಅದಕ್ಕೆಲ್ಲಾ ಕೊಡುತ್ತಾ ಇದೆ. ಅದರಲ್ಲಿ ಲೋಪ ಇಲ್ಲ.

ಸ್ಪೆಷಲ್ ಟ್ರೀಟ್‌ಮೆಂಟು, ಕರಪ್ಷನ್ ಈ ವಿಚಾರದಲ್ಲಿ ಆಪಾದನೆ ಮಾಡಲಾಯಿತು. ಒಂದು ರಿಪೋರ್ಟು ಕಾದು ನೋಡುತ್ತಾ ಇದ್ದೇವೆ, ನ್ಯೂನಾತಿರಿಕ್ತಗಳು ಇದ್ದರೆ ನರಿಪಡಿಸುತ್ತೇವೆ. ಇಷ್ಟು ಹೇಳಿ ಈ ಮೂಲ ನಿರ್ಣಯವನ್ನು ಅಂಗೀಕಾರ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

11-30 A.M.

Mr. SPEAKER.—Question is:

"That a sum not exceeding Rs. 18,52,000 be granted to the Government to defray the charges which will come in course of payment during the year ending 31st day of March 1955, in respect of 'Jails and Convict Settlements'."

The motion was adopted.

DEMAND No. 16—POLICE.

29—POLICE.

Mr. SPEAKER.—Motion moved:

"That a sum not exceeding Rs. 1,19,80,500 be granted to the Government to defray the charges which will come in course of payment during the year ending 31st day of March 1955, in respect of 'Police'."

Provision of rent-free houses to the Police of Bangalore City.

Sri R. ANANTARAMAN (Chamarajpet).—I beg to move:

"That the demand under the head '29. Police' for Rs. 1,19,80,500 be reduced by Rs. 100 (to raise a discussion that rent-free houses are not provided to the Police in Bangalore City)."

Sir, it is a well known fact that the Constables in Bangalore City and Mysore City are paid a very low salary. They get about forty rupees a month. I have tabled this cut motion with a view to see that the morale of the police is not broken. There is a purpose why the morale of the police should be kept as high as ever. If these police constables are not accommodated in rent-free quarters and if they are not paid above their wants, they will be very much dissatisfied and when they come in contact with the civil population, I am afraid, their morale will be certainly tampered with. I learn that such rent-free quarters are provided only for Reserve Police in City and Civil Station. Apart from this, there is no such facility for the other police. Many of these police constables have to pay fifteen to twenty rupees house rent. They are not paid any house rent allowance either. Will it be possible for a constable to lead a decent life in Bangalore City?

(Sri R. ANANTARAMAN.)

Therefore, it is very necessary that Government should get some quarters constructed and give them to these police officials free of rent. If that is not possible, at least on a very reasonable rent they may be provided with quarters. Sir, even last year a cut motion was tabled by one of my friends here for enhancing the salary of the police constable. I once again urge that it is but necessary that they may be provided with rent-free houses and thereby raise the morale of the Police and keep that morale as high as ever.

Mr. SPEAKER.—Cut motion moved:

"That the demand be reduced by Rs. 100."

Sri M. PALANIYAPPAN (Ulsoor).—Sir, in supporting the cut motion moved by Sri Anantaraman I would just like to say a few words. Sir, Officers of the Police Department enjoy all facilities and luxuries whereas the constable who is the very foundation of the Department and who guards the public does not get any facility. Starting from the Sub-Inspector all higher officers get free quarters whereas the police constable whose salary does not exceed Rs. 40 is made to pay for and live in a rented house. It will be practically impossible for him to make both ends meet. With his big family to be maintained, if he has to pay a house rent of ten to fifteen rupees out of his forty rupees pay, we can well imagine his plight. He will be left with nothing except what he might manage to collect from the public. If we want to see that the police constables work efficiently and honestly, the pay of these officials must be increased. It is the duty of the Government to see that at least they are provided with rent-free quarters as an immediate relief. I learn that some quarters have been built near Adagodi and I suggest that the Reserve Police may be shifted there as their services will be indented upon only at times of emergency and the quarters that are at present being given to them may be allotted to the police constables.

ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಸ್ವಾಮಿ, ಈ ಪೋಲೀಸು ಇಲಾಖೆಯಲ್ಲಿ ಮುಖ್ಯವಾಗಿ ಕೆಲಸ ನಡೆಯಬೇಕಾದರೆ ಕಾರಣಕರ್ತರಾದ ಕಾನ್ಸ್ಟೇಬಲ್ಸ್ ಕೆಲಸ ಎಷ್ಟು ಕಠಿಣತರವಾದುದೆಂಬುದನ್ನು ನಾನು ವಿವರಿಸುವುದಕ್ಕೆ ಹೋಗುವುದಿಲ್ಲ. ಈಗ 10 ವರ್ಷಗಳಲ್ಲಿ ಸುಮಾರು 30 ಲಕ್ಷ ರೂಪಾಯಿಗಳಿದ್ದ ಬಡ್ಜೆಟ್ ಈಗ 1 ಕೋಟಿ 20 ಲಕ್ಷಕ್ಕೇರಿದೆ. ಅದರಂತೆ ಅವರ ಸಂಬಳಸಾರಿಗೆಯೂ ಈಗ ಸ್ವಲ್ಪ ಹೆಚ್ಚಾಗಿದೆಯಾದರೂ 22 ರೂಪಾಯಿಗಳು ಮಾತ್ರ ಅವರಿಗೆ ಬರುತ್ತಿದೆ. ನಮ್ಮ ಸಂಸ್ಥಾನದಲ್ಲೇ ಕಂಜೋರ್ನ್ಮೆಂಟ್ ಪ್ರದೇಶ ಮೈಸೂರಿಗೆ ಸೇರಿದಾಗ ಅಲ್ಲಿ ಕಾನ್ಸ್ಟೇಬಲುಗಳಿಗೆ ಇಲ್ಲಿನವರ ಎರಡರಷ್ಟು ಸಂಬಳವಿತ್ತು. ಒಂದೇ ಕಡೆ ಈ ರೀತಿಯಾದ ವ್ಯತ್ಯಾಸವಿರುವುದು ಸ್ಪಷ್ಟವಾಗಿದೆ. ಇದೂ ಅಲ್ಲದೆ ಅವರಿಗೆ ಬೇರೆ ಅಲೋಯನ್ಸ್ ಹೆಚ್ಚಾಗಿ ಬರುತ್ತಿತ್ತು. ಪ್ರತಿಯೊಬ್ಬರಿಗೂ ಅಲ್ಲ ಕ್ವಾರ್ಟರ್ಸ್ ಇದೆ. ಇಲ್ಲಿ ಬಡ ನೌಕರರಿಗೆ ಸುಮಾರು 17 ರೂಪಾಯಿಗಳು ಅಲೋಯನ್ಸ್ ಸೇರಿ ಒಟ್ಟಿನಲ್ಲಿ 40 ರೂಪಾಯಿಗಳು ಬರಬಹುದು.

ಒಂದು ಸಂಸಾರವನ್ನು ಸುನೂತ್ನವಾಗಿ ನಡೆಸಿಕೊಂಡು ಹೋಗಬೇಕಾದರೆ, ಇಲಾಖೆಯಲ್ಲಿ ತನ್ನ ಕೆಲಸಕಾರ್ಯಗಳನ್ನು ನಿರ್ವಿಘ್ನವಾಗಿ ನಡೆಸಿಕೊಂಡು ಹೋಗಬೇಕಾದರೆ, ಈ ಪೋಲೀಸ್ ಕಾನ್ಸ್ಟೇಬಲ್‌ಗೆ ಅಲ್ಪ ಸ್ವಲ್ಪ ಬಡ್ಜೆಟ್ ಹೆಚ್ಚಾದರೂ ರಿಯಾಯಿತಿಯನ್ನು ತೋರಿಸಬೇಕಾಗುತ್ತದೆ. ಈ ಇಲಾಖೆಯಲ್ಲಿ ಈಗ ಮೂರು ಡಿ.ಐ.ಜಿ. ಗಳಿದ್ದಾರೆ. ಹಿಂದೆ ಇರಲಿಲ್ಲ. ಅದರ ಜೊತೆಗೆ ಹೆಡ್ ಕ್ವಾರ್ಟರ್ಸ್, ಅಸಿಸ್ಟೆಂಟ್‌ರು ಬೇರೆ. ಇವರಿಗೆಲ್ಲಾ ಈಗ ಉನ್ನತ ಮಟ್ಟದ ಗ್ರೇಡ್ ಕೊಟ್ಟಿದೆ. ಹೀಗೆ ಇವರಿಗೆಲ್ಲಾ ಇಷ್ಟೊಂದು ಜಾಸ್ತಿ ಕೊಡಬೇಕಾದರೆ, ಈ ಬಡ ನೌಕರರಿಗೆ ಏನು ರಿಯಾಯಿತಿ ತೋರಿಸಿದಹಾಗಾಯಿತು? ಇವರ ಸ್ಥಿತಿ ಹೇಗೆ? ಒಂದು ವೇಳೆ ಇವರಿಗೆ ವಾಸಕ್ಕೆ ಮನೆ ಸಿಕ್ಕದೆ ಬೇರೆ ಕಡೆ ವಾಸಮಾಡಿಕೊಂಡಿದ್ದು ಕೆಲಸಕ್ಕೆ ಅನಿವಾರ್ಯದಿಂದ 24 ಘಂಟೆ ಹೊತ್ತಾಗಿ ಬಂದರೆ ಕೆಲಸದಿಂದ ವಜಾ ಮಾಡುತ್ತೀರಿ. ಇದು ಯಾವ ನ್ಯಾಯ! ಲೆಕ್ಕಾಚಾರ ವಿಲ್ಲದ ಮೇಲ್ಪಟ್ಟ ಆಫೀಸರುಗಳ ಸಂಖ್ಯೆಯನ್ನು ಹೆಚ್ಚಿಸಿ ಖರ್ಚಿನ ಬಾಬನ್ನು ಒಂದಕ್ಕೆ ನಾಲ್ಕರಷ್ಟು ಹೆಚ್ಚಿಸಿಕೊಂಡಿರುವಾಗ ಇವರಿಗೇಕೆ ಯಾವ ರೀತಿಯ ರಿಯಾಯಿತಿಯನ್ನೂ ತೋರಿಸಿಲ್ಲ! ಈ ಐ.ಪಿ.ಎಸ್. ಸ್ಕೀಂ ಬಂದ ಮೇಲೆ ಯಾರಿಗೆ ಅನುಕೂಲವಾಯಿತು! ದೊಡ್ಡ ಅಧಿಕಾರಿಗಳು ಮಾತ್ರ ತಮಗೆ ಅನುಕೂಲ ಕಲ್ಪಿಸಿಕೊಂಡರೆ ಸಣ್ಣ ಪುಟ್ಟ ನೌಕರರ ಗತಿಯೇನು! ದೇಶದ ಜನತೆಯ ಪ್ರಾಣ, ಮಾನ, ಆಸ್ತಿಪಾಸ್ತಿಗಳನ್ನು ರಕ್ಷಿಸತಕ್ಕ ಜವಾಬ್ದಾರಿ ಸಲ್ಲತಕ್ಕದ್ದು ಈ ಪೋಲೀಸ್ ಇಲಾಖೆಯ ಕಾನ್ಸ್ಟೇಬಲ್‌ಗಳಿಗೆ. ಅವರನ್ನು ಈ ರೀತಿ ಕೆಳದರ್ಜೆಯಲ್ಲಿಟ್ಟುಕೊಂಡಿರುವುದರಿಂದ ಈ ಕೆಲಸಕ್ಕೆ ಹೆಚ್ಚು ದಕ್ಷತೆಯುಳ್ಳ ಮತ್ತು ವಿದ್ಯಾವಂತರಾದವರು ಬರದೇ ಇರುವುದಕ್ಕೆ ಕೊರತೆ ಉಂಟಾಗಿದೆ. ಈಗಿನ ಕಾಲದಲ್ಲಿ ಆಧುನಿಕ ರೀತಿಯಲ್ಲಿ ಒಂದು ಕೇನು ನಡೆಸುವುದಕ್ಕಾಗಲಿ ಅಥವಾ ದಕ್ಷತೆಯಿಂದ ಕೆಲಸ ನಿರ್ವಹಿಸುವುದಕ್ಕಾಗಲಿ ವಿದ್ಯೆ ಇರಬೇಕು. ಇದಕ್ಕೆ ಅರ್ಹತೆ ಇರಬೇಕಾದರೆ ಸಾಕಷ್ಟು ಸಂಬಳಸಾರಿಗೆ ಇರಬೇಕು. ಈತನಿಗೆ ಸಂಬಳ ಸಾರಿಗೆ ಕಡಮೆಯಾಗಿರುವುದು ಲಂಚ ರುಷುವತ್ತುಗಳಿಗೆ ಕೈ ಒಡ್ಡಲು ಕಾರಣವಾಗಿರಬಹುದೆಂದರೆ ಅದು ಅತಿಶಯೋಕ್ತಿ ಆಗಲಾರದು. ಆದುದರಿಂದ ಇದನ್ನು ಹೆಚ್ಚಿಸುವುದು ಅತ್ಯಗತ್ಯ. ತಾವು ಎಷ್ಟುಮಟ್ಟಿಗೆ ಮೇಲ್ಪಟ್ಟ ದರ್ಜೆಯವರ

ವಿಚಾರದಲ್ಲಿ ಅನಕ್ಕೆ ವಹಿಸಿ, ಅವರ emoluments ಉತ್ತಮಪಡಿಸಿರುತ್ತೀರೋ ಅದೇ ರೀತಿ ಶ್ರದ್ಧೆ ವಹಿಸಿ ಇವರಿಗೂ ಒಂದಕ್ಕೆ ನಾಲ್ಕರಷ್ಟು ನಂಬಳ ಕೊಡಬೇಕು. ಈ ವಿಚಾರವನ್ನು ಅತ್ಯಂತ ಸಹಾನ ಭೂತಿಯಿಂದ ಸರ್ಕಾರದವರು ಪರಿಶೀಲಿಸಬೇಕೆಂದು ತಿಳಿಸಿ ನಾನ ಇದಕ್ಕೆ ನನ್ನ ಪೂರ್ಣ ಬೆಂಬಲ ಕೊಡುತ್ತೇನೆ.

ಶ್ರೀ ವಿ. ಆರ್. ನಾಯ್ಡು (ಮಲ್ಲೇಶ್ವರ).—ಈ ವಿಚಾರದಲ್ಲಿ ವಿನಯ ಪೂರ್ವಕವಾಗಿ ಒಂದಂಶವನ್ನು ತಿಳಿಸುತ್ತೇನೆ. ಈ ಪೋಲೀಸಿನವರ ಸೇವೆ ಸ್ಮರಣೀಯವಾದುದು ಮತ್ತು ಇವರು 1942ನೆಯ ಇನವಿಯಲ್ಲಿ ಅಮೋಘವಾದ ಸೇವೆ ನಲ್ಲಿಸಿರುತ್ತಾರೆ. ಆಗ ಇಂದಿನ ಜನನಾಯಕರೆಲ್ಲಾ, ಇಂದು ಆಡಳಿತ ಸೂತ್ರಗಳನ್ನು ದೇಶದ ನಾನಾ ಭಾಗಗಳಲ್ಲಿ ವಹಿಸಿರುವ ನಾಯಕರೆಲ್ಲಾ, ಈ ಪೋಲೀಸಿನವರ ಶಿಸ್ತಿಗೆ ತುತ್ತಾಗಿ, ಅವರ ತ್ಯಾಗ ಬುದ್ಧಿಯಿಂದ ಇಂದು ಅಧಿಕಾರ ವಹಿಸಿರುವುದು ಸರ್ವರಿಗೂ ವೇದ್ಯವಾಗಿದೆ. ಇಂದು ದೇಶದಲ್ಲಿ ಶಿಸ್ತು, ಸಂಯಮ, ರಕ್ಷಣೆ—ಈ ಕಾರ್ಯಗಳು ಯಶಸ್ವಿಯಾಗಿ ನಡೆದಿರುವುದು ಈ ಪೋಲೀಸ್‌ನವರ ಕೆಲಸ ಕಾರ್ಯಗಳಿಂದ. ಇವರಿಗೆ ಆಗಿರುವ ಅನ್ಯಾಯ ಕಡಮೆ ಸಂಬಳಸಾರಿಗೆ ಒಂದು ಮಾತ್ರವೇ ಅಲ್ಲದೆ, ಕ್ರೂರ ವಿಧಿ ಬೇರೆ ಅವರನ್ನು ಕಾಡಿಸುತ್ತಿರುತ್ತದೆ. ಒಬ್ಬೊಬ್ಬ ಪೋಲೀಸ್ ಕಾನ್ಸ್ಟೇಬಲ್ಲಿಗೂ 3-4-5 ಮಕ್ಕಳುಗಳಿರುತ್ತಾರೆ. ಇಂಥವರ ವಿಚಾರದಲ್ಲಿ ಸಂಪೂರ್ಣ ಸಹಾನುಭೂತಿ, ಉದಾರನೀತಿ ಸರ್ಕಾರದವರಿಗೆ ಇರಬೇಕಾದುದು ಅತ್ಯಗತ್ಯವೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪ (ಒಳಾಡಳಿತ ಮತ್ತು ಕೈಗಾರಿಕೆ ಶಾಖೆಗಳ ಮಂತ್ರಿಗಳು).—ಈಗ ಬೆಂಗಳೂರಿನಲ್ಲಿ 1,824 ಮಂದಿ ಪೋಲೀಸಿನವರಿದ್ದಾರೆ. ಇವರ ಪೈಕಿ 589 ಮಂದಿಗೆ ಗವರ್ನಮೆಂಟ್ ಕ್ವಾರ್ಟರ್ಸ್ ಕೊಟ್ಟಿದೆ. ಅಂದರೆ 4 ಮಂದಿ ಇನ್ಸ್ಪೆಕ್ಟರಿಗೆ, 21 ಮಂದಿ ಸಬ್ ಇನ್ಸ್ಪೆಕ್ಟರಿಗೆ, 54 ಮಂದಿ ದಫೇದಾರರಿಗೆ, ಮತ್ತು 510 ಮಂದಿ ಪೋಲೀಸ್ ಕಾನ್ಸ್ಟೇಬಲುಗಳಿಗೆ—ಒಟ್ಟು 589 ಮಂದಿಗೆ ಈ ಕ್ವಾರ್ಟರ್ಸ್ ದೊರಕಿದೆ. ಬಾಕಿ ಉಳಿದ 1,235 ಮಂದಿಗೆ ಕ್ವಾರ್ಟರ್ಸ್ ಗಳಿಲ್ಲ. ಇದರಲ್ಲಿ 14 ಮಂದಿ ಇನ್ಸ್ಪೆಕ್ಟರುಗಳು, 40 ಮಂದಿ ಸಬ್‌ಇನ್ಸ್ಪೆಕ್ಟರುಗಳು, 12 ಮಂದಿ ಸಾರ್‌ಜೆಂಟ್ಸ್, 8 ಮಂದಿ ಹೆಡ್ ಕಾನ್ಸ್ಟೇಬರ್ಸ್, 13 ಮಂದಿ ಜಮೇದಾರರು, 196 ಮಂದಿ ದಫೇದಾರರು ಮತ್ತು 952 ಮಂದಿ ಕಾನ್ಸ್ಟೇಬಲ್‌ಗಳು ಇದ್ದಾರೆ. ಆದರೆ ಇವರಿಗೆ ಬೇರೆ ರೀತಿಯ ಸೌಲಭ್ಯವನ್ನೊದಗಿಸಿದೆ. ಪೋಲೀಸ್ ಇನ್ಸ್ಪೆಕ್ಟರಿಗೆ ಮಾಹೆಯಾನ 15 ರೂಪಾಯಿಗಳು, ಸಬ್ ಇನ್ಸ್ಪೆಕ್ಟರ್ ಮತ್ತು ಸಾರ್‌ಜೆಂಟ್‌ಗಳಿಗೆ ಮಾಹೆಯಾನ 10 ರೂಪಾಯಿಗಳು, ಹೆಡ್ ಕಾನ್ಸ್ಟೇಬಲ್ ಮತ್ತು ಜಮೇದಾರರಿಗೆ ಮಾಹೆಯಾನ 8 ರೂಪಾಯಿಗಳು, ದಫೇದಾರ್ ಮತ್ತು ಕಾನ್ಸ್ಟೇಬಲ್‌ಗಳಿಗೆ ಮಾಹೆಯಾನ 5 ರೂಪಾಯಿಗಳು—ಈ ರೀತಿ ಹೌಸ್ ರೆಂಟ್ ಅಲೋಯನ್ಸ್ ಕೊಡುತ್ತಿದೆ. ಮನೆಗಳನ್ನು ಒದಗಿಸಿಕೊಟ್ಟವರಿಗೆ ನೀರಿನ ವನತಿ ಅಷ್ಟಾಗಿ ಇಲ್ಲದೇ ಇದ್ದುದು ಕಂಡುಬಂದು ಅದಕ್ಕಾಗಿ ಬೋರ್ ವೆಲ್ಸ್ ತೆಗೆಸಲು ಏರ್ಪಡಿಸಿ ಈ ಬಗ್ಗೆ ಆಂದಾಜು ಸಹ ತಯಾರಾಗಿ ಸೂಕ್ತ ಕಾರ್ಯಕ್ರಮ ನಡೆಯುತ್ತಿದೆ. ಈ ಮನೆಗಳು ಅಡುಗೋಡಿಯಲ್ಲಿವೆ.

ಶ್ರೀವಾರ್ ಬಿ. ಹುಚ್ಚೇಗೌಡರು ಈ ಪೋಲೀಸ್ ಕಾನ್ಸ್ಟೇಬಲ್‌ಗಳಿಗೆ ಕೊಡುತ್ತಿರುವ ನಂಬಳ ಸಾರಿಗೆ ಬಹಳ ಕಡಮೆಯೆಂದು ಹೇಳಿದರು. ಬೆಂಗಳೂರಿನಲ್ಲಿರ ತಕ್ಕವರಿಗೆ 22 ರೂಪಾಯಿ ನಂಬಳ, 23 ರೂಪಾಯಿ ಡಿಯರ್‌ನೆಸ್ ಅಲೋಯನ್ಸ್, 5 ರೂಪಾಯಿ ಹೌಸ್ ರೆಂಟ್ ಅಲೋಯನ್ಸ್, 2 ರೂಪಾಯಿ ಲೋಕಲ್ ಅಲೋಯನ್ಸ್, 1 ರೂಪಾಯಿ ಯೂನಿಫಾರಂ ಅಲೋಯನ್ಸ್—ಒಟ್ಟು ತಿಂಗಳಿಗೆ 53 ರೂಪಾಯಿ ನಲ್ಲುತ್ತಿದೆ. ಈ ಕಾನ್ಸ್ಟೇಬರ್‌ಗಳಿಗೆ ಮನೆಗಳನ್ನು ಕಟ್ಟಿಸಿಕೊಡಬೇಕೆಂಬ ವಿಚಾರದಲ್ಲಿ ತ್ವರಿತ ಕಾರ್ಯಕ್ರಮ ಕೈಗೊಳ್ಳಬೇಕೆಂಬ ಉದ್ದೇಶ ಇಟ್ಟಕೊಂಡಿದ್ದಾರೆ ಆದರೆ ಇದಕ್ಕೆ ಅಡ್ಡಿ ಬಂದಿರುವುದು ಹಣಕಾಸಿನ ಅಡಚಣೆ. ಪ್ರತಿವರ್ಷವೂ ಈ ಬಗ್ಗೆ ಬಡ್ಜೆಟ್ಟಿನಲ್ಲಿ ಹಣ ವನ್ನೊದಗಿಸುತ್ತಿರುವ ಪ್ರಯತ್ನ ನಡೆಯುತ್ತಿರುವುದು ತಾವು ಬಡ್ಜೆಟ್‌ನಲ್ಲಿ ಕೊಟ್ಟಿರುವ ಅಂಕಿ ಅಂಶಗಳನ್ನು ಪರಿಶೀಲಿಸಿದರೆ ಗೊತ್ತಾಗುತ್ತದೆ. ಈ ವಿಚಾರದಲ್ಲಿ ಆಯಾ ಸ್ಥಳದ ಅನುಕೂಲತೆ, ಅನಾನುಕೂಲತೆ, ಹಣಕಾಸಿನ ಪರಿಸ್ಥಿತಿ ನೋಡಿಕೊಂಡು ಮನೆಗಳನ್ನು ಕಟ್ಟಿಸತಕ್ಕ ಬಗ್ಗೆ ಸಹಾನುಭೂತಿಯಿಂದ ವರ್ತಿಸಬೇಕೆಂಬ ಮನೋಭಾವ ಸರ್ಕಾರಕ್ಕೆ ಇರುವುದರಿಂದ ಮಾನ್ಯ ಸದಸ್ಯರು ತಮ್ಮ ಪ್ರೋತ್ಸಾಹನೀರ್ಣಯವನ್ನು ವಾಪಸು ತೆಗೆದುಕೊಳ್ಳುತ್ತಾರೆಂದು ನಂಬಿದ್ದೇನೆ.

Sri R. ANANTARAMAN.—I seek leave to withdraw my cut motion.

The motion was, by leave, withdrawn.

Mr. SPEAKER.—The next cut motion No. 32 stands in the name of Sri G. Sivappa. Cut motions Nos. 34, 40, 55, 56, 63 and 64 all fall under the main demand. They are too general and therefore are inadmissible as cut motions.

The next cut motion is in the name of Sri Madaiah. He is not present. The next cut motion is in the name of Sri Srinivasa Iyengar, *i.e.*, No. 34. It is inadmissible as I have already pointed out. Cut motion Nos. 35 and 39, I think, were discussed in a way. Therefore out of the remaining three cut motions, Sri Srinivasa Iyengar can move one.

Sri S. SRINIVASA IYENGAR.—Can I move 34 ?

Mr. SPEAKER.—No. It is too general and it cannot be discussed in the form of a cut motion.

Sri S. SRINIVASA IYENGAR.—Then, Sir, instead of moving cut motions, if the House agrees, we can take up the main demand itself.

Mr. SPEAKER.—If the House as a whole agrees, I have no objection. What is the opinion of the House ? Can the debate on the main demand be taken up ?

Sri M. PALANIYAPPAN.—Sir, we have got some cut motions.

Mr. SPEAKER.—That is why I am taking the sense of the House. I have already indicated—yesterday I made a lengthy statement—that I would proceed as per rules. In exceptional circumstances, if the entire House feels that I may adopt this procedure, then I will adopt it. If the House seems to be in favour of discussing the main demand, then I will take up the demand.

(The House was in favour of taking up the demand for general discussion).

Mr. SPEAKER.—Then I will take up the main demand.

ಶ್ರೀ ಜಿ. ಶಿವಪ್ಪ.—ಪೋಲೀಸ್ ಇಲಾಖೆಯ ವಿಚಾರದಲ್ಲಿ ನಾನು ಕೇವಲ ಎರಡು ಮೂರು ವಿಚಾರಗಳನ್ನು ತಿಳಿಸಬೇಕೆಂದು ಅಪೇಕ್ಷಿಪಡುತ್ತೇನೆ. ಮೊದಲನೆಯದಾಗಿ ಈ ಇಲಾಖೆ ಅತಿ ಮುಖ್ಯವಾದದ್ದು ಎಂಬುದನ್ನು ಸರ್ಕಾರದವರಿಗೆ ತಿಳಿಸಿ ಇದು ಎಷ್ಟು ಚೆನ್ನಾಗಿ ಕೆಲಸ ಮಾಡಿದರೆ ಅಷ್ಟೂ ಜನರಿಗೆ ಒಳ್ಳೆಯದಾಗುತ್ತದೆ ಎಂದು ಹೇಳಿ ನಾನು ಭಾವಿಸುತ್ತೇನೆ. ನ್ಯಾಯಾಂಗ ಎನ್ನುತಕ್ಕದ್ದರಲ್ಲಿ ಉನ್ನತ ಮಟ್ಟದಲ್ಲರತಕ್ಕವರುಗಳಿಂದ ಹಿಡಿದು ಒಬ್ಬ ಪೋಲೀಸ್ ಕಾನ್ಸ್ಟೇಬಲ್ಲನವರೆಗೂ ಒಂದೇ ರೀತಿಯಲ್ಲಿ ಕಾಣಬೇಕು ಎಂಬುದನ್ನು ಡೈಸಿ ಹೇಳಿದ್ದಾರೆ. ನ್ಯಾಯ ಪರಿಪಾಲನೆಯಾಗಬೇಕಾದರೆ ಪೋಲೀಸ್ ಇಲಾಖೆಯಲ್ಲಿ ತಕ್ಕ ವಾತಾವರಣ ಕಲ್ಪನ ಬೇಕಾದದ್ದ ಅತಿ ಮುಖ್ಯ ಎಂದು ಹೇಳಿ ನಾನು ಭಾವಿಸುತ್ತೇನೆ. ಇವತ್ತಿನ ದಿವಸ ನಮ್ಮ ನಂಸ್ಥಾನದಲ್ಲಿ ಅಂಥ ವಾತಾವರಣ ಇದೆಯೇ, ಸನ್ನಿವೇಶ ಇದೆಯೇ ಎಂಬುದನ್ನು ನಾವು ಯೋಚನೆ ಮಾಡಬೇಕಾಗಿದೆ.

Mr. SPEAKER.—Shall I fix a time limit? There must be at least 10 minutes available for reply. Each speaker will have five minutes.

ಶ್ರೀ ಜಿ. ಶಿವಪ್ಪ.—ನಮ್ಮ ನಂಸ್ಕೃತಿ ಯಾವ ರೀತಿ ಇದೆ ಎಂದರೆ ಹಿಂದಿನಿಂದಲೂ ಸಹ ಮಹಾ ಮಹಾ ಚಕ್ರವರ್ತಿಗಳ ಕಾಲದಲ್ಲೂ ದುಷ್ಟ ನಿಗ್ರಹ ಶಿಷ್ಟ ಪರಿಪಾಲನ ಎಂಬುದೇ ಆಗಿತ್ತು; ಅದನ್ನು ಗಮನಿಸಬೇಕಾಗಿದೆ. ಆದರೆ ಈಗೇನಾಗಿದೆ ದುಷ್ಟ ಪರಿಪಾಲನೆ ಶಿಷ್ಟ ನಿಗ್ರಹ ಎಂಬುದು ಕಂಡ ಬರುತ್ತಾ ಇದೆ ಎಂದು ಹೇಳಿದರೆ ಅದೇನೂ ಅತಿಶಯೋಕ್ತಿಯ ಲ್ಲ ಎಂದು ನಾನು ಭಾವಿಸುತ್ತೇನೆ. ಏಕೆಂದರೆ ಅನೇಕ ನಂದರ್ಭಗಳಲ್ಲಿ ಪೋಲೀಸ್ ಇಲಾಖೆ ಸರಿಯಾಗಿ ಕೆಲಸ ಮಾಡದೆ ಇದ್ದುದರಿಂದ—ಈಗಿನ ಗೃಹ ಸಚಿವರಿಗೂ ಸಹ ಗೊತ್ತು—ಅನೇಕ ಖೂನಿ ಕೇಸುಗಳು ಆಗಿ ಅನ್ಯಾಯಗಳಾಗಿವೆ. ಪಿರ್ಯಾದಿಯನ್ನೇ ಅಪರಾಧಿಯನ್ನಾಗಿ ಮಾಡಿದ್ದ ಅನೇಕ ಕೇಸುಗಳಿವೆ. ಹೀಗಾಗದಂತೆ ಮಾಡಲು ಯತ್ನಿಸ ಬೇಕೆಂದು ಹೇಳುತ್ತೇನೆ.

ಮುಖ್ಯವಾಗಿ ಇಂದು ಇರತಕ್ಕ ಕೆಲವು ಲೋಪ ದೋಷಗಳನ್ನು ತಿಳಿಸಲು ನಾನು ಅಪೇಕ್ಷೆಪಡುತ್ತೇನೆ. ಇತ್ತೀಚೆಗೆ ನಮ್ಮ ನಂಸ್ಥಾನದಲ್ಲಿ ವಿಲೀನೀಕರಣವಾದ ಮೇಲೆ ಈ ಐ.ಪಿ.ಎಸ್. ಅಧಿಕಾರಿಗಳು ಬಂದುದರ ದೆಸೆಯಿಂದ ನಮಗೆ ಅಪಾರವಾದ ನಷ್ಟವಾಗಿದೆ ಎಂದು ಹೇಳುತ್ತೇನೆ. ನಮ್ಮ ಮಾನ್ಯ ಎ ತ್ರರು ಹೇಳಿದಂತೆ ಕಾನ್ಸ್ಟೇಬಲ್‌ಗಳ ಸಂಬಳ ಇದ್ದ ಹಾಗೆಯೇ ಇದೆ. ಮೇಲ್ಪಟ್ಟ ಅಧಿಕಾರಿಗಳ ಸಂಬಳ ಇಂಟಗ್ರೇಷನ್‌ಗೆ ಒಳಪಟ್ಟವರೆ ಲೆ ಯಥೇಚ್ಛವಾಗಿ ಹೆಚ್ಚಾಗಿದೆ. ಇದರಿಂದ ಕೆಳಮಟ್ಟದ ನೌಕರರಲ್ಲಿ ಒಂದು ವಿಧವಾದ ಮನಸ್ಸಿನಲ್ಲಿ ಜಿಗುಪ್ಸೆ ಇತ್ಯಾದಿಗಳಾಗಿ, ಉತ್ಸಾಹ ವಿಲ್ಲದಂತಾಗಿದೆ ಎಂದು ಹೇಳಬೇಕಾಗಿದೆ. ಏನಾದರೂ ಮಾಡಿ ಕೇಂದ್ರ ಸರ್ಕಾರದೊಡನೆ ಹೊಡೆದಾಡಿ I.P.S. ಅನ್ನು ತೆಗೆಯಿಸಲು ಯತ್ನಮಾಡುತ್ತೀರಿ ಎಂದು ಭಾವಿಸುತ್ತೇನೆ

ಆಮೇಲೆ ಈ ಪೋಲೀಸ್ ಇಲಾಖೆಯ ಕಾನ್ಸ್ಟೇಬಲು ಗಳ ಸ್ವಾಯಂದರ್ದು ಬಹಳ ಕೆಳಮಟ್ಟದಲ್ಲಿದೆ ಎಂದು ತಿಳಿಸಲು ನಾನು ಅಪೇಕ್ಷೆಪಡುತ್ತೇನೆ. ಮಾನ್ಯ ಗೃಹ ಸಚಿವರೂ ಕೂಡ ಕೆಲವು ದಿವಸಗಳ ಹಿಂದೆ ಲಂಡನ್ನಿಗೆ ಹೋಗಿದ್ದರು. ಅಲ್ಲಿ ಅವರು ನೋಡಿರಬಹುದು. ಅಲ್ಲಿ ಪೋಲೀಸ್ ಕಾನ್ಸ್ಟೇಬಲು ಎಂದರೆ ಜ್ಞಾನದ ಮುದ್ದೆಯಾಗಿರುತ್ತಾನೆ. ಯಾವ ನಂದರ್ಭದಲ್ಲಿ ಸಾರ್ವಜನಿಕರಿಗೆ ಏನು ಸಹಾಯ ಬೇಕಾದರೂ ಮಾಡುತ್ತಾನೆ. ನಮ್ಮಲ್ಲಿ ಈಚೆಗೆ ಪೋಲೀಸ್ ಕಾನ್ಸ್ಟೇಬಲು ಎಂದರೆ ಸ್ವಲ್ಪ ಭಯ ತಪ್ಪುತ್ತಾ ಇದೆ. ಮೊದಲು ನಾನು ಹುಡುಗನಾಗಿದ್ದಾಗ ಪೋಲೀಸ್ ಕಾನ್ಸ್ಟೇಬಲ್ಲನ್ನು ನೋಡಿದರೆ ನಮಗೆ ಹೆದರಿಕೆಯಾಗುತ್ತಾ ಇತ್ತು. ಆದ್ದರಿಂದ ಪೋಲೀಸ್ ಕಾನ್ಸ್ಟೇಬಲು ಎಂದರೆ ಒಂದು ವಿಧವಾದ ಭಯ ಜನರಲ್ಲಿ ಇರತಕ್ಕದ್ದು ಹೌದಿ ನಿಜವಾಗಿಯೂ ಆತ ನ್ಯಾಯವನ್ನು ಸರಿಯಾದ ರೀತಿಯಲ್ಲಿ ಪರಿಪಾಲನೆ ಮಾಡುತ್ತಾನೆ, ನ್ಯಾಯ ಪರಿಪಾಲನೆಗೆ ಸಾಧನಪಾಗಿರತಕ್ಕ ನೌಕರ ಎಂಬ ಭಾವನೆ ಜನರಲ್ಲುಂಟಾಗುವಂತೆ ಮಾಡಲು ಅವರಿಗೆ ಟ್ರೈನಿಂಗು ಮತ್ತು ವಿದ್ಯೆ ಕೊಡತಕ್ಕದ್ದು ಅತ್ಯವಶ್ಯಕ ಎಂದು ತಿಳಿದು ಕೊಂಡಿದ್ದೇನೆ. ಪೋಲೀಸ್ ಟ್ರೈನಿಂಗ್ ಸ್ಕೂಲ್ ಎಂದೇನೋ ಇದೆ. ನಮ್ಮ ಕಾನ್ಸ್ಟೇಬಲ್‌ಗಳನ್ನು ನೋಡಿದರೆ ಆ ರೀತಿ ಟ್ರೈನ್ಡ್ ಆದಂತೆ ಕಾಣುವುದಿಲ್ಲ. ಈಗ ನಮ್ಮ ದೇಶದ ಸನ್ನಿವೇಶ, ಅಂತರ ರಾಷ್ಟ್ರೀಯ ಪರಿಸ್ಥಿತಿ ಸರಿಯಾಗಿಲ್ಲದೇ ಇರುವುದರಿಂದಲೂ ಮತ್ತು ಪಾಕಿಸ್ತಾನಕೂ. ನಮ್ಮ ದೇಶಕ್ಕೂ ಮಧ್ಯೆ ಇರತಕ್ಕ ಅಸಮಾನತೆ ಜಾಸ್ತಿಯಾಗಿರುವುದರಿಂದಲೂ ಈ ಪೋಲೀಸ್ ಇಲಾಖೆ ಅತಿ ದಕ್ಷತೆಯಿಂದ ಕೆಲಸ ಮಾಡ ತಕ್ಕದ್ದು ಅತ್ಯವಶ್ಯಕ ಎಂಬುದನ್ನು ಸರ್ಕಾರದ ಮುಂದೆ ಒತ್ತಿ ಹೇಳಲು ಅಪೇಕ್ಷೆಪಡುತ್ತೇನೆ.

ಈಗ ಪೋಲೀಸ್ ಇಲಾಖೆಯಲ್ಲಿ ಡ್ಯೂಯರ್ ಅಡ್ಮಿನಿಸ್ಟ್ರೇಷನ್ ನಡೆಯುತ್ತಾ ಇದೆ. ಸರ್ಕಾರಕ್ಕೂ ಇಲಾಖೆಗೂ ಘರ್ಷಣೆ ಉಂಟಾಗುತ್ತದೆ ಎಂಬ ಅಭಿಪ್ರಾಯ ಬರುತ್ತಾ ಇದೆ. ಅದನ್ನು ಅತಿ ಜಾಗ್ರತೆ ಎಂದರೆ ಎಷ್ಟು ಜಾಗ್ರತೆ ಸರಿಪಡಿಸುತ್ತೀರೋ ಅಷ್ಟು ಜಾಗ್ರತೆ ಜನರಿಗೆ ಒಳ್ಳೆಯದಾಗುತ್ತದೆ, ಜನರಲ್ಲಿ ನೆಮ್ಮದಿ ಇರುತ್ತದೆ, ಕಾನೂನು ಸರಿಯಾದ ರೂಪದಲ್ಲಿ ಜಾರಿಗೆ ಬರುತ್ತದೆ ಎಂದು ತಿಳಿಸಲು ಅಪೇಕ್ಷೆಪಡುತ್ತೇನೆ. ಅಧಿಕಾರಿಗಳು ಸರ್ಕಾರದವರು ಕೊಟ್ಟಂಥ ಆರ್ಡರುಗಳನ್ನು ಜಾರಿ ಮಾಡುವುದು ಅವರ ಕರ್ತವ್ಯ. ಅದೇ ರೀತಿಯಲ್ಲಿ ಸರ್ಕಾರದವರೂ ಕೂಡ ಅವರನ್ನು ಉತ್ತಮವಾದ ರೀತಿಯಲ್ಲಿ ಕಾಣತಕ್ಕದ್ದು ಅವಶ್ಯಕ. ಇರತಕ್ಕ ಭಿನ್ನಾಭಿಪ್ರಾಯಗಳು ಅತಿ ಜಾಗ್ರತೆಯಾಗಿ ಸರಿಹೋಗಿ ಜನರಲ್ಲಿ ಒಂದು ವಿಧವಾದ ನಂಬಿಕೆ, ವಿಶ್ವಾನವುಂಟಾಗಲು ಸನ್ನಿವೇಶವನ್ನು ಕಲ್ಪನೆ ಮಾಡಬೇಕೆಂದು ಹೇಳಿ ಸಲಹೆ ಕೊಡಲಕ್ಕೆ ಅಪೇಕ್ಷೆಪಡುತ್ತೇನೆ.

ಇನ್ನೊಂದು ಸಲಹೆ ಎಂದರೆ ಫಸ್ಟ್ ಕೋರ್ಟು, ಸೆಕೆಂಡ್ ಕೋರ್ಟುಗಳಲ್ಲಿ ನಬ್ ಇನ್‌ಸ್ಪೆಕ್ಟರುಗಳು ಮತ್ತು ಇನ್‌ಸ್ಪೆಕ್ಟರುಗಳನ್ನು ಪ್ರಾಸಿಕ್ಯೂಷನ್ನಿಗೆ ನೇಮಕಮಾಡುತ್ತಾ ಇದ್ದಾರೆ. ಅದಕ್ಕೆ ಬದಲಾಗಿ ಲಾಯರ್ ಗಳಿಗೆ ಅವಕಾಶ ಕೊಟ್ಟರೆ, ಸಾರ್ವಜನಿಕ

ರಿಗೆ ಒಂದು ಟ್ರೈನಿಂಗ್ ಕೊಟ್ಟರೆಹಾಗಾಗುತ್ತದೆ. ಮತ್ತು ಪ್ರಾಸಿಕ್ಯೂಟಿಂಗ್ ಇನ್‌ಸ್ಪೆಕ್ಟರುಗಳಿಗೆ ಬದಲಾಗಿ ಲಾಯರುಗಳಿಗೇ ಅವಕಾಶ ಕಲ್ಪಿಸಿಕೊಡಬೇಕು. ಬೊಂಬಾಯಿ ಮತ್ತು ಮದ್ರಾಸಿನಲ್ಲಿ ಆ ರೀತಿ ಇದೆ, ಅದನ್ನು ಜಾಗ್ರತೆ ಜಾರಿಗೆ ತರಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

*Sri S. SRINIVASA IYENGAR.—Sir, I oppose the demand. The allotment for Police Department is on the increase year by year. In 1950-51, the allotment was 84·67 lakhs, while it is 1·2 crores today. So within the course of five years, the allotment for the Police has increased by about 35 lakhs. The Government of Mysore are contented in having 1·1 crores towards Medical, but they want 1·2 crores towards Police !! Sir, I know the Hon'ble Minister is sure to tell me that we are spending the minimum in Mysore State for Police. He will also draw my attention to figures and show that Mysore State is spending lesser than what other States do. I have figures worked by myself, and I have got them here also. Bombay, for every rupee of its expenditure, spends two annas and one pie for the Police. In Madras it is one anna and nine pies per rupee. West Bengal spends 2 annas and one pie and in Mysore it is only about 9½ pies.

12 NOON.

It is true we are spending only 9½ pies in every rupee of our expenditure, but I may say that Mysore State's scale of salary does not stand comparison with other States. Sir, in Bombay the Inspector-General of Police gets Rs. 2,500 to 3,000, the D.I.G. gets Rs. 1,950 to Rs. 2,150, the D.S.P. gets Rs. 600 to Rs. 1,400, the A.S.P. Rs. 350 to Rs. 850, the Inspector Rs. 250 to Rs. 350 and the Constable Rs. 35 to 75. In Mysore the Inspector-General of Police gets Rs. 1,250, the D.I.G. gets Rs. 600 to Rs. 1,150, the D.S.P. also gets Rs. 600 to Rs. 1,150, the A.S.P. gets Rs. 200 to Rs. 300, the Inspector gets within Rs. 200 and the Constable gets Rs. 22 to Rs. 32. So, if calculation is made on this scale, then the Government of Mysore can never think of that grade. Well, Sir, Government of Mysore have one Inspector-General, three Deputy Inspectors-General, 10 District Superintendents of Police, 28 Assistant Superintendents of Police, 144 Inspectors *plus* 5 of Bellary and 325 Sub-Inspectors : such large number is taking away much of the expenditure ! What I would urge is, please reorganise your Police Department in such a manner as to bring it to the standard prevalent in other States of India. You may reduce their number and enlarge their power and increase the jurisdiction. You can extract better work and with the reorganisation, I believe, you can have a very efficient Police Department.

Sri H. SIDDAVEERAPPA.—Where are you going to send away the men who are already appointed ?

Sri S. SRINIVASA IYENGAR.—I never meant that you must send them home. But, as and when vacancies arise, you need not fill them up. I am sorry, I have not the necessary time to explain in detail although I have worked out in detail a matter which is sufficient for me to speak for one hour. Therefore, Sir, I will just give the main idea I am having about this reorganisation. It is very necessary that we should reorganise the Department in such a manner as to up-grade the salary rates and give them wider jurisdiction and wider powers. Again, Sir, the Police Act should be redrafted. This Act was framed in 1908. The circumstance that was in 1908 was entirely different from what it is to-day. To-day, ours is a democratic country ; ours is a sovereign body. Therefore, we should redraft the Police Act so that we may have full confidence in our Police and get the maximum work from them. Then, Sir, I wish to ask Government whether the Assistant Superintendents of Police and the Deputy Inspectors-General have any statutory powers. The Deputy Inspector-General has no independent power at all ; but still we are maintaining these officers. Between the Deputy Inspector-General and the District Superintendent of Police you have duel authority. Anyway, I do not press that matter further. I will be content by saying we need reorganisation of this Department very early.

(SRI S. SRINIVASA IYENGAR.)

Further, Sir, I would like to urge upon Government that we should see that in taking men for I.P.S., men in the ranks also must have certain opportunity. There must be promotional vacancies. We have taken to direct recruitment, but let the men in service also get the opportunity. You fix the ratio between direct recruitment and promotion. Why I suggest this is, not only to prevent stagnation but also to keep up the efficiency of our men.

ಶ್ರೀ ಬಿ. ಟಿ. ಕೆಂಪರಾಜ್ (ಬೆಂಗಳೂರು ದಕ್ಷಿಣ-ಅನುಸೂಚಿತ ಜಾತಿಗಳು).—ಸ್ವಾಮಿ, ಇಲ್ಲಿ ಮೈಸೂರು ಸಂಸ್ಥಾನದಲ್ಲಿರುವ ಪೋಲೀಸು ಇಲಾಖೆ ಅನೇಕ ವರ್ಷಗಳಿಂದ ಕೆಲಸ ಮಾಡಿಕೊಂಡು ಬರುತ್ತಿದೆ. ಸ್ವರಾಜ್ಯ ಬಂದಮೇಲೂ ಸಹ ಈ ಇಲಾಖೆ ಹಿಂದೆ ಯಾವರೀತಿಯಾಗಿತ್ತೋ ಆದೇರೀತಿಯಾಗಿಯೆ ಇದೆ. ಶ್ರೀ ಶ್ರೀನಿವಾಸಯ್ಯಂಗಾರ್‌ರವರು ಹೇಳಿದ ರೀತಿ ಯಲ್ಲಿ ಸಾಧಾರಣವಾಗಿ ಅನವಶ್ಯಕವಾದ ಹುದ್ದೆ ಗಳನ್ನು ನಾವು ಇತ್ತೀಚೆಗೆ ಬೆಳೆಸಿಕೊಂಡು ಬರುತ್ತಿದ್ದೇವೆ. ಉದಾಹರಣೆಗೆ ಎ.ಎಸ್.ಪಿ. ಮತ್ತು ಡಿ.ಐ.ಜಿ. ಇವರುಗಳಿಗೆ ಹೆಚ್ಚಿನ ಕೆಲಸವಿಲ್ಲದಿದ್ದರೂ ಸಹ ಅವರನ್ನಿಟ್ಟು ಅವರಿಗೆ ಹೆಚ್ಚಿನ ಸಂಬಳ ಸಾರಿಗೆ ಕೊಡುತ್ತಲೇಇದೆ.

ಇದರ ಜೊತೆಗೆ ಪ್ರತಿ ತಾಲ್ಲೂಕಿಗೆ ಒಬ್ಬ ಸಬ್‌ಇನ್ಸ್‌ಪೆಕ್ಟರ್ ಇರುತ್ತಾರೆ. ಅವರಿಗೆ ವಿಪರೀತ ಕೆಲಸ ಕಾರ್ಯಗಳಿರುತ್ತವೆ. ಒಂದು ಕೇಸು ತನಿಖೆ ಮಾಡುವ ವಿಚಾರದಲ್ಲಿ ಈ ಸಬ್‌ಇನ್ಸ್‌ಪೆಕ್ಟರ್ ಪೂರ್ಣ ಜವಾಬ್ದಾರಿ ಹೊತ್ತಿರುತ್ತಾನೆ. ಈ ಸಬ್‌ಇನ್ಸ್‌ಪೆಕ್ಟರ್ ಎನ್ನಿಸಿ ಕೊಂಡವನು ಕೇಸಿಗೆ ಸಂಬಂಧಿಸಿದ ಎಲ್ಲ ಕೆಲಸ ಗಳನ್ನೂ ಮಾಡಿ, ತನಿಖೆಯನ್ನು ಪೂರ್ಣಗೊಳಿಸಿ ಅದಕ್ಕೆ ಸಂಬಂಧಪಟ್ಟ ರಿಕಾರ್ಡುಗಳನ್ನು ಇನ್‌ಸ್ಪೆಕ್ಟರ ಮುಂದೆ ಇಟ್ಟರೆ ಅದಕ್ಕೆ ಈ ಅಧಿಕಾರಿ ರುಜು ಹಾಕ ತಕ್ಕ ಕಾರ್ಯಕ್ರಮ ಎಂದಮೇಲೆ ಈ ಇನ್‌ಸ್ಪೆಕ್ಟರ್ ಮಾಡತಕ್ಕ ಕೆಲಸವೆಲ್ಲಾ ಸಬ್‌ಇನ್ಸ್‌ಪೆಕ್ಟರೇ ವಹಿಸಿರು ತಾನೆ. ಅಂದರೆ ಕಾರ್ಯಕರ್ತ ಇವನು, ಹೆಸರು ಮಾತ್ರ ಪೋಲೀಸ್ ಇನ್‌ಸ್ಪೆಕ್ಟರಿಗೆ. ಹೀಗೆ ನಿಜವಾಗಿ ಕೆಲಸಮಾಡತಕ್ಕ ಈ ಸಬ್‌ಇನ್‌ಸ್ಪೆಕ್ಟರಿಗೆ ಪ್ರೋತ್ಸಾಹ ಏಲ್ಲ. ಆದಕಾರಣ, ಸರ್ಕಾರದವರು ಸಾಧ್ಯವಾದ ಮಟ್ಟಿಗೂ ಹೆಚ್ಚಿನ ಸಂಬಳದ ಅಧಿಕಾರಿಗಳನ್ನು ಪೋಲೀಸ್ ಇಲಾಖೆಯಲ್ಲಿ ಕಡಮೆಮಾಡಿ, ಈ ಕಾನ್‌ಸ್ಟೇಬಲ್ಸ್‌ಗಳ ಸಂಖ್ಯೆಯನ್ನು ಹೆಚ್ಚುಮಾಡಿ ಅವರ ಸಂಬಳ ಸಾರಿಗೆಗಳನ್ನು ಹೆಚ್ಚಿಸಿದ ಪಕ್ಷದಲ್ಲಿ ಇವರು ಲಂಚ ರುಷುವತ್ತುಗಳ ಹಾವಳಿಗೆ ಸಿಲುಕದೆ ಬಹಳ ಮೆಹನತ್ತಿನಿಂದ ತಮ್ಮ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಾರೆ.

ಅಧ್ಯಕ್ಷರು.—ಕಾನ್‌ಸ್ಟೇಬಲ್‌ಗಳ ವಿಚಾರವನ್ನು ಈಗಾಗಲೇ ಇತರ ಸದಸ್ಯರು ಪ್ರಸ್ತಾಪಿಸಿದ್ದಾರೆ, ಕಾಲ ವಾಗುತ್ತಾ ಬಂತು. ಬೇಗ ತಮ್ಮ ಭಾಷಣವನ್ನ ಮುಗಿಸುವುದು ಒಳ್ಳೆಯದು.

ಶ್ರೀ ಬಿ. ಟಿ. ಕೆಂಪರಾಜ್.—ಈ ಕಾನ್‌ಸ್ಟೇಬಲ್‌ಗಳ ಸಂಬಳ ಸಾರಿಗೆಗಳನ್ನು ಹೆಚ್ಚಿಸಲು ಹಣವಿಲ್ಲದಿದ್ದರೆ, ಈ ಇಲಾಖೆಯಲ್ಲಿ ಇರತಕ್ಕ ಹೆಚ್ಚಿನ ಮೇಲಾಧಿಕಾರಿಗಳ ಸಂಖ್ಯೆಯನ್ನು ಆದಷ್ಟೂ ಕಡಮೆಮಾಡಿ ಅದರ ಪರಿ ಣಾಮವಾಗಿ ದೊರಕುವ ಹಣದಿಂದ ಈ ಸಂಬಳ ಸಾರಿಗೆಗಳನ್ನು ಹೆಚ್ಚಿಸಬೇಕೆಂದು ಈ ಸಮಯದಲ್ಲಿ ಸೂಚಿಸಲಿಚ್ಛಿಸುತ್ತೇನೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ (ಕಡೂರು).—ಸ್ವಾಮಿ, ಈ ಪೋಲೀಸ್ ಇಲಾಖೆಯ ವಿಚಾರವಾಗಿ ನಾನು ಕಟುವಾಗಿ ನಾಲ್ಕು ಮಾತನಾಡಿದರೆ ಯಾರೂ ಅನ್ಯಥಾ ತಿಳಿದುಕೊಳ್ಳಬಾರದೆಂದು ನನ್ನ ವಿನಂತಿ. ನಮ್ಮ ದೇಶದ ಈ ಪೋಲೀಸ್ ಸಿಬ್ಬಂದಿ ಪಾನ ನಿರೋಧ ಜಾರಿಯಲ್ಲಿರತಕ್ಕ ಕಡೆ ವರ್ತಿಸುತ್ತಿರುವ ವಿಧಾನ ಈ ಇಲಾಖೆಗೇ ಕೆಟ್ಟ ಹೆಸರನ್ನು ತರುತ್ತದೆ ಯೆಂದರೆ ಅತಿಶಯೋಕ್ತಿಯಲ್ಲ. ಪಾನನಿರೋಧ ಜಾರಿ ಯಲ್ಲಿರತಕ್ಕ ಪ್ರದೇಶಗಳಲ್ಲಿ ಕಳ್ಳಬಟ್ಟಿ ಸಾರಾಯಿ ತಯಾರಿಕೆಗೆ ಕುಮ್ಮಕ್ಕು ಕೊಡುತ್ತಿರುವವರೆಂದರೆ, ಈ ಪೋಲೀಸ್ ಸಿಬ್ಬಂದಿ. ಈ ವಿಚಾರವನ್ನು ಯಾರಾದರೂ ಪತ್ತೆಹಚ್ಚಿ ಮೇಲಧಿಕಾರಿಗಳಿಗೆ ತಿಳಿಸಲು ಪ್ರಯತ್ನಿಸಿದರೆಂದರೆ ಆ ರೀತಿ ಮಾಡುವವರಿಗೆ ಇವರು ಇಲ್ಲದ ಕಿರುಕುಳ ಕೊಡುತ್ತಾರೆ. ಈ ರೀತಿ ಬೇಲೆ ಎದ್ದು ಹೊಲ ಮೇಯಲು ಉಪಕ್ರಮಿಸಿದರೆ ಗತಿಯೇನು? ಪೋಲೀಸ್ ಇಲಾಖೆಯವರು ಸತ್ಯನಂಧರಾಗಿರಬೇಕು, ತಾವು ನಿರ್ವಹಿಸಿರತಕ್ಕ ಕಾರ್ಯವನ್ನು ಜನತೆಯ ಹಿತರಕ್ಷಣೆಗೆ ತಕ್ಕ ರೀತಿಯಲ್ಲಿ ನಡೆಸಬೇಕು. ಈ ರೀತಿ ಅವರು ವರ್ತಿಸುತ್ತಿಲ್ಲ. ಉದಾಹರಣೆಗೆ, 1952ನೆಯ ಇಸವಿ ಯಲ್ಲಿ ಪೋಲೀಸ್ ಇಲಾಖೆಗೆ ಸಂಬಂಧಿಸಿದ ಒಂದು ರಿವಾಲ್ವರ್ ಕಳೆದುಹೋಯಿತು. ಅನಂತರ ಈ ಬಗ್ಗೆ ಇಲಾಖೆಯವರೇ ತನಿಖೆ ನಡೆಸಿದಮೇಲೆ ಆ ರಿವಾಲ್ವರ್ ಒಬ್ಬ ಮುಖ್ಯಾಧಿಕಾರಿಯಿಂದ ವಸೂಲಾಯಿತು. ಆದರೆ ಈ ಬಗ್ಗೆ ಆ ಅಧಿಕಾರಿಯ ಮೇಲೆ ಯಾವ ರೀತಿಯ ಕ್ರಮವನ್ನೂ ಕೈಗೊಳ್ಳಲಲ್ಲ. ಅಂದರೆ, ಇಲ್ಲದ ದಾಕ್ಷಿಣ್ಯ, ಪ್ರಭಾವಕ್ಕೆ ಒಳಗಾಗಿ ಸರ್ಕಾರದವರು ಅವರ ಮೇಲೆ ಯಾವ ರೀತಿಯ ಕಾರ್ಯಕ್ರಮವನ್ನೂ ಕೈಗೊಳ್ಳಲಲ್ಲವೇನೋ ಎಂಬ ಅನುಮಾನ ಜನರಲ್ಲಿ ಮೂಡಿತು. ಯಾವ ಅಧಿಕಾರಿಗಳೇ ಆಗಲಿ—ಸಂಬಂಧೀಕರೇ ಆಗಿರಲಿ ಅಥವಾ ಪ್ರಭಾವ ಬೀರು ವಂಥವರೇ ಆಗಿರಲಿ—ಈ ರೀತಿ ದಾಕ್ಷಿಣ್ಯಕ್ಕೆ ಒಳಗಾಗ ಬಾರದು. ಹಾಗಾದಪಕ್ಷದಲ್ಲಿ ಈ ಕಾಂಗ್ರೆಸ್ ಸರ್ಕಾರ ಉಳಿಯುವುದಿಲ್ಲ. ಈ ಪೋಲೀಸ್ ಅಧಿಕಾರಿಗಳು ನಿಸ್ಪೃಹತೆಯಿಂದ, ದಕ್ಷತೆಯಿಂದ, ಸತ್ಯನಂಧತೆಯಿಂದ ಕೆಲಸ ಕಾರ್ಯಗಳನ್ನು ಮಾಡಿದರೆ ದೇಶಕ್ಕೆ ಒಳ್ಳೆ ಯದು. ಆದಕಾರಣ ಪೋಲೀಸ್ ಇಲಾಖೆಯವರ ವರ್ತನೆಯ ವಿಚಾರದಲ್ಲಿ ಸರ್ಕಾರದವರು ಸಾಕಷ್ಟು ಬಂದೋಬಸ್ತನ್ನು ಮಾಡಬೇಕೆಂದು ವಿನಂತಿ ಮಾಡಿ ಕೊಂಡು ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಟಿ. ಎಸ್. ಮೂಡಲಗಿರಿಗೌಡ (ಕುಣಿಗಲು).—ಸ್ವಾಮಿ, ಈ ಪೋಲೀಸ್ ಇಲಾಖೆಯ ಮೇಲೆ ಮಾತ ನಾಡುತ್ತಾ ಅನೇಕರು ಅನೇಕ ಉದಾಹರಣೆಗಳನ್ನ ಕೊಟ್ಟಿದ್ದಾರೆ. ದಕ್ಷತೆಗಿಂತಲೂ ಸಂಖ್ಯಾಬಲ ಜಾಸ್ತಿ ಯಾಗಿದೆ. ದಕ್ಷತೆ ಜಾಸ್ತಿಯಾಗಬೇಕೆಂಬ ವಿಷಯವನ್ನು ಎಲ್ಲರೂ ಕೂಡ ವ್ಯಕ್ತಪಡಿಸಿದ್ದಾರೆ. ಇದೇ ವಿಷಯ ವನ್ನು ನಾನು ಒಂದೆರಡು ಉದಾಹರಣೆಗಳನ್ನು ಕೊಟ್ಟು ವ್ಯಕ್ತಪಡಿಸಲಿಚ್ಛಿಸುತ್ತೇನೆ. ಸ್ವಾಮಿ, ತುಮಕೂರು ತಾಲ್ಲೂಕಿನಲ್ಲಿ ಸೊಂಡಿಗೆರೆ (1) ಎಂದು ಒಂದು ಗ್ರಾಮ, ಅಲ್ಲಿ ಒಬ್ಬ ಹೆಂಗಸು, ಗಂಡ ತೀರಿಹೋಗಿದ್ದಾನೆ, ಆಕೆಗೆ ಮಕ್ಕಳಿಲ್ಲ. ಆಕೆಯ ಗಂಡನ ಅಣ್ಣ—ಭಾವ—ಮನೆಯ ಲ್ಲಿರತಕ್ಕ ಹೆಂಗಸನ್ನು ಓಡಿಸಿ ಆಸ್ತಿಯನ್ನು ಸ್ವಾಧೀನ ಮಾಡಿಕೊಳ್ಳಬೇಕೆಂಬ ಉದ್ದೇಶದಿಂದ ಆ ಹೆಣ್ಣು ಹೆಂಗ ಸಿನ ಮನೆಯಲ್ಲಿದ್ದ ಒಡವೆ ವಸ್ತುಗಳನ್ನೆಲ್ಲಾ ಕಳ್ಳತನ ಮಾಡಿ, ದರೋಡೆ ಮಾಡಿದ್ದಾನೆ. ಈ ವಿಷಯವನ್ನು

ಆ ಹೆಂಗನು ಪೋಲೀಸ್ ಸ್ಟೇಷನ್‌ನಲ್ಲಿ ವರದಿ ಮಾಡಿದ್ದಾಳೆ. ಇದು ಆದಮೇಲೆ ಆ ಪಾರ್ಟಿಯನ್ನು ಕರಯಿಸಿಕೊಂಡು, ವಿಚಾರಮಾಡಿ, ಮತ್ತೆ ಆ ಹೆಂಗಸನ್ನು ಕರೆಸಿಕೊಂಡ ನೀನು ಕೋರ್ಟ್‌ಗೆ ಹೋಗಬೇಕು ಎಂದು ಹಟ್ಟಿ ಪೋಲೀಸ್ ಸ್ಟೇಷನ್‌ನಲ್ಲಿದ್ದ ಅಧಿಕಾರಿ ಹೇಳಿ ಕಳುಹಿಸಿದ್ದರು. ಅಲ್ಲಿಂದ ಆ ಹೆಂಗನು ಬಂದು ನನ್ನನ್ನು ಕೇಳಿದಮೇಲೆ ನಾನು ಡಿ. ಎಸ್. ಪಿ. ಅವರ ಹತ್ತಿರ ಆಕೆಯನ್ನು ಕರೆದುಕೊಂಡು ಹೋಗಿ, ಹೆಂಗನು ಕೋರ್ಟ್‌ಗೆ ಹೋಗಿ ಸಾಮಾನುಗಳನ್ನು ಬಿಡಿಸಿಕೊಳ್ಳುವುದು ಸರಿಯೇ, ಆ ಹೆಂಗಸಿಗೆ ರಕ್ಷಣೆ ಕೊಡಿ ಎಂದು ಡಿ. ಎಸ್. ಪಿ. ಅವರಿಗೆ ಅರ್ಜಿ ಕೊಟ್ಟು ನುಮಾರು ನಾಲ್ಕು ತಿಂಗಳು ಆಯಿತು; ಇವೊತ್ತಿನವರೆಗೂ ಆ ಹೆಂಗಸಿಗೆ ರಕ್ಷಣೆ ಕೊಟ್ಟಿಲ್ಲ. ಇದು ಒಂದು ವಿಷಯ. ಇನ್ನೊಂದು ವಿಷಯ ಅದೇ ತಾಲ್ಲೂಕಿನಲ್ಲಿ..... ಹಳ್ಳಿ ಎಂದು ಇದೆ. ಅಲ್ಲಿ ಹನುಮೇಗೌಡ ಎಂಬ ಒಬ್ಬ ಆತನ ಜಮೀನಿನಲ್ಲಿ ಯಾವಾಗಲೋ ಒಂದು ಸಾರಿ ಪ್ಲೇಗು ತಗಲಿತ್ತು ಎಂದು ಹೇಳಿ.....ಗ್ರಾಮಸ್ಥರು ನಾಲ್ಕು ಜನ ನಾಲ್ಕಾರು ಬೇರೆ ಬೇರೆ ಷೆಡ್ಡುಗಳನ್ನು ಹಾಕಿಕೊಂಡರು. ತನ್ನ ಜಮೀನಿನಲ್ಲಿ ಹಾಕಿಕೊಂಡರೂ ಸಹ ಆತ ನುಮ್ಮನೆ ಇದ್ದ. ಪ್ಲೇಗು ನಿವಾರಣೆ ಆದಮೇಲೆ ಅವರು ತಮ್ಮ ತಮ್ಮ ಗ್ರಾಮಗಳಿಗೆ ಹೋಗಿ ವಾಸಮಾಡುವುದಕ್ಕೆ ಬದಲಾಗಿ ಅದೇ ಗ್ರಾಮದಲ್ಲಿ ಆ ಜಮೀನಿನಲ್ಲೇ ಷೆಡ್ಡು ಹಾಕಿಕೊಂಡು ಇವೊತ್ತಿನ ದಿವನ ಅವನು ತನ್ನ ಆಸ್ತಿಯನ್ನೆಲ್ಲಾ ಬಿಟ್ಟು ಬಿಟ್ಟು ಬೇರೆ ಕಡೆಗೆ ಹೋಗಬೇಕಾದ ಸಂದರ್ಭ ಬಂದಿದೆ. ಅಲ್ಲಿ ಯಾವ ಬೆಳೆಯನ್ನು ಬೆಳೆಯಲಿಕ್ಕೂ ಸಾಧ್ಯವಿಲ್ಲ. ಯಾವ ಬೆಳೆ ಬೆಳೆದರೂ ರಕ್ಷಣೆ ಇಲ್ಲ. ಡಿ. ಎಸ್. ಪಿ. ಅವರನ್ನು ಅಲ್ಲಿಗೆ ಕರೆದುಕೊಂಡು ಹೋಗಿದ್ದೆ, ವಾಸ್ತವಾಂಶ ಎಲ್ಲವನ್ನೂ ಅವರಿಗೆ ತಿಳಿಸಿದ್ದೇನೆ. ಅವರೇ ಖುದ್ದು ನೋಡಿಕೊಂಡು ಬಂದಿದ್ದಾರೆ. ಒಂದು ವರ್ಷ ಆಯಿತು. ಇವೊತ್ತಿನವರಿಗೂ ಆತನಿಗೆ ರಕ್ಷಣೆ ಸಿಕ್ಕಿಲ್ಲ. ಇದನ್ನ ಏಕೆ ಹೇಳುತ್ತಾ ಇದ್ದೇನೆ ಎಂದರೆ ಇಂಥ ವಿಷಯಗಳು ವಿಶೇಷವಾಗಿ ಬೆಳೆಯುತ್ತಾ ಬಂದಿವೆ. ಕಾರ್ನೆಲ್‌ಬಲ್‌ನಿಂದ ಹಿಡಿದು ಮೇಲ್ಮಟ್ಟದವರೆಗೂ ದಕ್ಷತೆ ಮುಖ್ಯವಾಗಿ ಬೇಕು; ಸಂಖ್ಯೆ ಅಲ್ಲ. ಶ್ರೀ ಶ್ರೀನಿವಾಸ ಅಯ್ಯಂಗಾರ್ಯರು 8 ಲಕ್ಷಕ್ಕೆ ಏರಿದೆ ಎಂದು ಹೇಳಿದರು ನಿಶ್ಚಯ,; ಕಾನ್‌ಸ್ಟೇಬಲುಗಳು ಮತ್ತು ಇತರ ಪೋಲೀಸ್ ಅಧಿಕಾರಿಗಳ ವರ್ಗ ಬೆಳೆಯುತ್ತಾ ಇದೆಯೇ ಹೊರತು ದಕ್ಷತೆ ಹೆಚ್ಚುತ್ತಾ ಇಲ್ಲ. ಸಾಮಾನ್ಯ ಜನರಿಗೆ ರಕ್ಷಣೆ ದೊರೆಯುತ್ತಾ ಇಲ್ಲ. ದೂರು ತೆಗೆದುಕೊಂಡು ಹೋದರೆ ದೂರು ಕೊಟ್ಟವರಿಗೇ ತೊಂದರೆ ಜಾಸ್ತಿಯಾಗುತ್ತಾ ಇದೆ. ರಕ್ಷಣೆ ಸಿಕ್ಕುತ್ತಾ ಇಲ್ಲ. ಇಂಥ ಸನ್ನಿವೇಶಗಳು ಜಾಸ್ತಿಯಾಗುತ್ತಾ ಇರುವುದರಿಂದ ಏನಾದರೂ ಮಾಡಿ ಅದನ್ನು ಕಂಡುಹಿಡಿದು ದಕ್ಷತೆ ಹೆಚ್ಚಿಸುವುದಕ್ಕೆ ಪ್ರಯತ್ನ ಮಾಡದೆ ಹೋದರೆ ಪ್ರಜಾಪ್ರಭುತ್ವ ರಾಜ್ಯಾಡಳಿತದಲ್ಲಿ ವಾಸಮಾಡತಕ್ಕ ಸಾಮಾನ್ಯ ಪ್ರಜೆಗಳಿಗೆ ಬಹಳ ಕಷ್ಟಕ್ಕೆ ಬರುತ್ತದೆ. ಅದನ್ನು ಪರಿಶೀಲನೆ ಮಾಡಬೇಕೆಂದು ನಾನು ತಮ್ಮಲ್ಲಿ ಹೇಳುತ್ತೇನೆ.

Sri M. V. RAMA RAO (Tumkur).—Sir, I have three things to say on the administration of the Police Department. The first is, Sir, that the manner in which the Police Department functions should be an index of the extent to which the rule of law prevails in the land. While I am on this point, I should like to invite the attention of the Hon'ble the Home Minister to the manner in which police officials are treated. Whether it is an officer or whether it is a constable—the manner in which an official attempts to perform his duty should be borne in mind when dealing with him. Where a police constable is trying to discharge his duty fearlessly and without showing any favour or without being overawed by the importance of the private individual who tries to prevent him from performing his official duties, the prestige of the Department and the prestige of the Government will be maintained only if the Government stands by that official in the discharge of his duties. That is a lesson which has been lost upon the Government for some time and I hope the Hon'ble the Home Minister will apply his mind to the particular case which I have already mentioned to him and which, I hope, he will now look into.

Sir, the second point which I should like to state is that the practice of calling for Police Diaries at Governmental level is to be deprecated and is to be deprecated severely. It may be that where an application for the withdrawal of Government from a prosecution is made, the Government would be compelled to apply its mind to the nature of the evidence for the prosecution. But Police Diaries have been called for not upon an application for withdrawal from prosecution by Government but during the course of investigation and the Hon'ble the Home Minister would be laying Government open and would be laying himself open to an accusation, unfounded though it may be, that there has been a certain amount of intervention in the course of investigation. Such a thing should not be allowed to happen. No opportunity should be given for such a suspicion being entertained. Sir, I have no desire to refer to matters which are *sub judice*, but the Home Minister will have occasion to notice, I am sure he has had occasion to notice, that such accusations have been made of intervention in the course of investigation and the practice of calling for Police

(SRI M. V. RAMA RAO.)

Diaries lends support and justification to such suspicions being entertained. Where there is an application before Government paying for withdrawal from a prosecution, Government may have to apply its mind to the evidence. Calling for Police Diaries either for satisfying oneself as to the sufficiency of the evidence on which a charge-sheet has to be placed or for the purpose of satisfying oneself whether there is *prima facie* case cannot be justified at all. Whether there is sufficient evidence for placing a charge-sheet is for the Police Sub-Inspector to decide. Whether there is a *prima facie* case or not is for the Second Class Magistrate to decide. It does not require intervention of the Minister. This is certainly a matter on which, I hope, the Hon'ble the Home Minister will make a clear statement.

Sir, the third point is, there must be proper scrutiny by Government into the way in which secret service charges are drawn and utilised. I have in my possession information that in the year 1951, a high-placed officer who went to investigate cases of dacoity in the District to which the Home Minister belongs, has drawn moneys for secret service charges and credited the bill to his own bank account. I request the Home Minister to look into the matter and see that such charges are not made against the Police Department in Mysore State. Whatever may be the differences of opinion between the officers of the Government and the Home Minister or other Ministers, the rule of law will disappear in Mysore State if these differences are allowed to influence the course of administration of the Police Department.

MR. SPEAKER.—Ten minutes I have promised to the Chief Minister for reply. I will now allow only two more speakers—Sri Prabhakar and Sri B. V. Narayana Reddy. Now, Sri Narayana Reddy may speak.

ಶ್ರೀ ಬಿ. ವಿ. ನಾರಾಯಣರೆಡ್ಡಿ (ಬಾಗೇಪಲ್ಲಿ—ಗುಡಿಬಂಡೆ).—ಸ್ವಾಮಿ, ಇದುವರೆಗೆ ಮಾತನಾಡಿದ್ದರಲ್ಲಿ ಮುಖ್ಯವಾಗಿ ಮಂತ್ರಿಗಳಿಗೂ ಮತ್ತು ಇಲಾಖಾ ಮುಖ್ಯಾಧಿಕಾರಿಗಳಿಗೂ ಭಿನ್ನಾಭಿಪ್ರಾಯವಿರುವುದು ಬಹಳ ಸ್ಪಷ್ಟವಾಗಿ ಅರ್ಥವಾಗುತ್ತಿದೆ. ಇದಕ್ಕೆ ಮುಖ್ಯವಾದ ಕಾರಣವೇನೆಂಬುದನ್ನು ಗಮನಿಸಬೇಕು. ಫೇವರಿಟಿಸಂ ಮತ್ತು ನೆಪಾಟಿಸಂ ಮುಂತಾದ್ದು ನಡೆಯುತ್ತಿರುವುದರಿಂದ ಈ ರೀತಿಯಾಗಿದೆಯೆಂಬುದು ಎಲ್ಲರೂ ಒಪ್ಪತಕ್ಕದ್ದೇ ಆಗಿದೆ. ಇದಕ್ಕೆ ಒಂದು ಉದಾಹರಣೆಯನ್ನು ಹೇಳಬಯಸುತ್ತೇನೆ.

ಏನೆಂದರೆ ಈ ಡಿ.ಐ.ಜಿ. ಯವರು ಗೃಹಸಚಿವರು ಅಧ್ಯಕ್ಷತೆ ವಹಿಸಿದ್ದ ಒಂದು ಸಮಾರಂಭದ ಸ್ಥಳದಲ್ಲಿ superior officer ಮೇಲೆ reckless allegation ಮಾಡಿ, ಅದನ್ನು ರುಜುವಾತುಪಡಿಸಲು ಸಾಧ್ಯವಾಗದೆ, ಅದಕ್ಕೆ material evidence ಸಿಕ್ಕದೆ ತಾವು ಹೇಳಿದುದನ್ನು ಅನಂತರ withdraw ಮಾಡಿಕೊಂಡರು. ಆದರೂ ಅವರ ಮೇಲೆ ಗೃಹಸಚಿವರು ಯಾವ ವಿಧವಾದ ಕಾರ್ಯಕ್ರಮಗಳನ್ನೂ ಕೈಗೊಳ್ಳಲಿಲ್ಲ, ಮತ್ತು ಅತನು ಈಗತಾನೇ ನಭೆಯ ಮಾನ್ಯ ಸದಸ್ಯರಾದ ಶ್ರೀ ಎಂ. ವಿ. ರಾಮರಾಯರು ಸೂಚಿಸಿದಂತೆ ಅತನ್ಮೇಲಿದ್ದ ಒಂದು ಸಾವಿರ ರೂಪಾಯಿನ ಹಣ ದುರುಪಯೋಗವಾದುದು ಗೊತ್ತಾಯಿತೆಂಬ ಉದ್ದೇಶದಿಂದ.....

ಶ್ರೀ ಎಂ. ವಿ. ರಾಮರಾವ್.—ಅವರು ಸೂಚಿಸಿರುವ ಆಫೀಸರ reference ಏನೂ ನಾನು ಮಾಡಿಲ್ಲ.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಇನ್ನೊಂದು ಅಂಶವೇನೆಂದರೆ, ಇನ್‌ಸ್ಪೆಕ್ಟರಿಗೂ, ಸೂಪರಿಂಟೆಂಡೆಂಟರಿಗೂ, ಇಲಾಖೆಯ ಮುಖ್ಯಾಧಿಕಾರಿಗೂ ಒಬ್ಬರಿಗೊಬ್ಬರಿಗೆ ಭಿನ್ನಾಭಿಪ್ರಾಯ ಬಂದು, ಇದುವರೆಗೂ ಶ್ರೀ ಸೋಮಪ್ಪನವರ ವಿಚಾರದಲ್ಲಿ 25 ಸಾವಿರ ರೂಪಾಯಿನ ಖರ್ಚು ಬಾಬು ಬಗ್ಗೆ ಏನೊಂದು ತನಿಖೆಯನ್ನೂ ನಡೆಸದೇ ಇದ್ದುದು, 900 ರೂಪಾಯಿನ ಸಾಲ ಪಡೆದದ್ದು, ಟಿ.ಎ. ಮತ್ತು ಡಿ.ಎ. ವಿಚಾರ ತನಿಖೆ ನಡೆಸದೆ ಹೋದದ್ದು—ಇವೆಲ್ಲಾ ಸರ್ಕಾರದ favouritism, nepotism ತೋರಿಸುತ್ತದೆ.

[Sri K. Prabhakar rose.]

MR. SPEAKER.—The main difficulty is want of time.

ಶ್ರೀ ಎಚ್. ಸಿದ್ದವೀರಪ್ಪ (ಒಳಾಡಳಿತ ಮತ್ತು ಕೈಗಾರಿಕೆ ಶಾಖೆಗಳ ಮಂತ್ರಿಗಳು).—ಇದುವರೆಗೂ ಸಾಮಾನ್ಯವಾಗಿ ನಡೆದಿರತಕ್ಕ ಚರ್ಚೆಯನ್ನು ನೋಡಿದರೆ ಬಹುಮಟ್ಟಿಗೆ ಅದರಲ್ಲಿ vague and general allegations, unfounded allegations, allegations with a view to create suspicion in the minds of the public, allegations of—if I may use the word and if it is parliamentary—mischievous import—ಈ ರೀತಿ ಹೇಳುವ ಬದಲು, ಸಂಸ್ಥಾನದಲ್ಲಿ ಪೋಲೀಸ್ ಇಲಾಖೆಯ ಆಡಳಿತ ಸುಗಮವಾಗಿ ನಡೆಯುತ್ತಿಲ್ಲ ಎಂದು ಒಂದು ಮಾತಿನಲ್ಲಿ ಹೇಳಿದರೆ ಸಾಕು ಎಂದು ಕಾಣುತ್ತದೆ.

ಶ್ರೀ ಬಿ. ವಿ. ನಾರಾಯಣರೆಡ್ಡಿಯವರು favouritism and nepotism ಎಂಬ ಪದಗಳನ್ನು ಉಪಯೋಗಿಸಿದರು. Nepotism ಎಂಬುದರ ಅರ್ಥ ನನಗೆ ತಿಳಿದಮಟ್ಟಿಗೆ ಯಾರಾದರೂ ಸಂಬಂಧೀಕರಿದ್ದರೆ ಅಥವಾ ಯಾರಾದರೂ ಬೇಕಾದವರಿದ್ದರೆ ಅವರನ್ನು ಕೆಳಗಿನಿಂದ ಮೇಲು ದರ್ಜೆಗೆ ಏರಿಸುವುದು. ನನ್ನ ಮಟ್ಟಿಗೆ ಹೇಳಬೇಕಾದರೆ ಈ ಡಿಪಾರ್ಟ್‌ಮೆಂಟ್‌ನಲ್ಲಿ ಒಬ್ಬ ಕಾನ್‌ಸ್ಟೇಬಲ್‌ನಿಂದ ಹಿಡಿದು ಮೇಲು ದರ್ಜೆಯವರೆಗೆ ನನಗೆ ಸಂಬಂಧಪಟ್ಟವರು ಯಾರೂ ಇಲ್ಲ. ಈ ಪೋಲೀಸ್ ಇಲಾಖೆ ಒಂದೇ ಅಲ್ಲ ಯಾವ ಸರ್ಕಾರದ ಅಧಿಕಾರದಲ್ಲಿಯೂ ಇಲ್ಲ. ನನ್ನ ಸಂಬಂಧೀಕರೆಲ್ಲ

ಹೊಲ ಉಳತಕ್ಕವರು, ನೇಗಿಲು ಹಿಡಿದು ಕೆಲಸಮಾಡ ತಕ್ಕವರು. ಆದುದರಿಂದ ಶ್ರೀಮಾನ್ ಬಿ. ವಿ. ನಾರಾಯಣರೆಡ್ಡಿಯವರು ಹೇಳಿರತಕ್ಕವಾದ ಪಾಸ್ತವಾಂಶಕ್ಕೆ ದೂರವಾದುದು; ಅದರಲ್ಲಿ ಯಾವ ತಿರುಳೂ ಇಲ್ಲ ವೆಂದು ಹೇಳಿದರೆ ಸಾಕಾಗಿದೆ. ಮಾನ್ಯ ಸದಸ್ಯರಿಗೆ ಈ ಸಭೆಯಲ್ಲಿ ಮಾತನಾಡತಕ್ಕ ಹಕ್ಕಿದೆ; ಹೇಳಬೇಕಾದರೆ ಅವರು ಹೇಳತಕ್ಕ ಮಾತಿಗೆ ಬೆಲೆಯಿದೆ ಎಂಬುದನ್ನು ಅರಿತು, ಅವರು ತಿಳಿಸಿರತಕ್ಕದ್ದು ದೇಶದ ಭದ್ರತೆ ಅಥವಾ ಅಭದ್ರತೆಗೆ ಕುಂದಕ ಬರುವಂತೆ ಇರಬಾರದು ಎಂಬುದನ್ನು ತಿಳಿದು ಮಾತನಾಡಿದ್ದರೆ ಚೆನ್ನಾಗಿತ್ತು ಎಂದು ಮಾತ್ರ ಸೂಚಿಸುತ್ತೇನೆ.

ಶ್ರೀಮಾನ್ ರಾಮರಾಯರು ಪೋಲೀಸ್ ಇಲಾಖೆಯ ಆಡಳಿತ ವಿಚಾರದಲ್ಲಿ, rule of law ಇರಬೇಕು ಎಂಬ ವಿಚಾರದಲ್ಲಿ ಮೂರು ಮೂಲ ತತ್ವಗಳನ್ನು ಹೇಳಿದರು. Rule of law ಇರಬೇಕು ಎಂಬ ವಿಚಾರದಲ್ಲಿ ಭಿನ್ನಾಭಿಪ್ರಾಯ ಏನೂ ಇಲ್ಲ. Rule of law ಏನು ಎಂಬುದನ್ನು ನಾನೂ ಸ್ವಲ್ಪ ಓದಿ ತಿಳಿದುಕೊಂಡಿದ್ದೇನೆ. ಆ ವಿಚಾರದಲ್ಲಿ, Rule of law ಗೆ ವಿರೋಧವಾಗಿ ಹೋಗಬೇಕೆಂಬ ವಾದ ಅಥವಾ ನೀತಿ ಸರ್ಕಾರಕ್ಕೆ ಇಲ್ಲ. Rule of law ಪ್ರಕಾರ ಹೋಗಬೇಕೇ ಹೊರತು ಬಿಟ್ಟು ಹೋಗುವುದಕ್ಕೆ ದಾರಿಯೂ ಇಲ್ಲ, ಅವಶ್ಯಕತೆಯೂ ಇಲ್ಲ ಎಂಬುದನ್ನು ಈ ಸಮಯದಲ್ಲಿ ಹೇಳುತ್ತೇನೆ.

ಇನ್ನೊಂದು ಪೋಲೀಸ್ ಡೈರಿಗಳನ್ನು ತರಿಸಿ ಕೊಳ್ಳುವುದು ಹೆಚ್ಚಾಗುತ್ತಿದೆ, ಈ ರೀತಿ ಏಕೆ ತರಿಸಿ ಕೊಳ್ಳಬೇಕು ಎಂದು ಕೇಳಿದರು. ಒಳ್ಳೆಯದು, ಹೇಳುತ್ತೇನೆ, ಪೋಲೀಸ್ ಡೈರಿಗಳಲ್ಲಿ ತರಿಸಿ ಇಂತಹ ವರಮೇಲೆ ಕೇಸುಹಾಕಿ, ಇಂತಹವರಮೇಲೆ ಕೇಸು ಹಾಕಬೇಡಿ ಎಂಬ ದೃಷ್ಟಿಯಿಂದ ಯಾವುದೊಂದು ಕೇಸನ್ನೂ ತರಿಸಿಲ್ಲ. ಒಂದು ವೇಳೆ ಅಂಥ ಒಂದು ಆಪಾದನೆ ನನ್ನ ಮೇಲೆ ಬಂದರೆ ಅಥವಾ ಸರ್ಕಾರದ ಮೇಲೆ ಬಂದರೆ ಆ ಆಪಾದನೆ ರುಜುವಾತಾದರೆ ಆ ಸರ್ಕಾರ ಅಥವಾ ಯಾವ ಮನುಷ್ಯನಮೇಲೆ ಆಪಾದನೆ ಬಂದಿದೆಯೋ ಆ ಮನುಷ್ಯ ಮಂತ್ರಿಮಂಡಲದಲ್ಲರಲಿಕ್ಕೆ ಅರ್ಹನಾದ ಮನುಷ್ಯನಾಗುವುದಿಲ್ಲ ಎಂಬುದನ್ನು ಈ ಸಮಯದಲ್ಲಿ ಹೇಳುತ್ತೇನೆ. ಆದರೆ ಕೇಸ್ ಡೈರಿಗಳನ್ನು ತರಿಸಬಾರದು ಎಂಬ ವಾದವನ್ನು ನಾನು ಒಪ್ಪುವುದಿಲ್ಲ. Ultimately for the purity of the administration—ultimately for the maintenance of the good administration in the Department, the Ministry is responsible. That he should not forget. ಯಾವುದಾದರೂ ನಡೆಯತಕ್ಕ ಒಂದು ಕಾರ್ಯ ಅಥವಾ ಏನಾದರೂ ಒಂದು ವಿಷಯ ತಿಳಿದುಕೊಳ್ಳಬೇಕಾದರೆ ಅಥವಾ ಇನ್‌ವೆಸ್ಟಿಗೇಷನ್ ಆದಮೇಲೆ ಯಾವ ರೀತಿ ನಡೆದಿದೆ ಅಥವಾ ಇನ್‌ವೆಸ್ಟಿಗೇಷನ್‌ಸ್ಟೇಜಿನಲ್ಲಿ ಏನಾದರೂ ಅನುಮಾನ ಬಂದು ಅದನ್ನು ಪರಿಹರಿಸಿಕೊಳ್ಳಬೇಕಾದರೆ ಅಂಥ ಸಂದರ್ಭದಲ್ಲಿ ತರಿಸಿಕೊಳ್ಳಬೇಕಾಗುತ್ತದೆ. ಇಂಥವರ ಮೇಲೆ ಕೇಸು ಹಾಕಿ, ಇಂಥವರ ಮೇಲೆ ಕೇಸು ಹಾಕಬೇಡಿ ಡೈರೆಕ್ಷನ್ ಯಾವ ಕೇಸಿನಲ್ಲೂ ನಾನು ಕೊಟ್ಟಿಲ್ಲ ಎಂದು ಈ ಸಮಯದಲ್ಲಿ ಹೇಳುತ್ತೇನೆ. ಆ ರೀತಿ ಯಾರೇ ಆಗಲಿ adverse inference ಡ್ರಾ ಮಾಡಲಿಕ್ಕಾಗಲಿ, ಮಂತ್ರಿಮಂಡಲದ ವಿರುದ್ಧ ಅಭಿಪ್ರಾಯವನ್ನು ರೂಢಿಸಲಿಕ್ಕಾಗಲಿ ಅವಕಾಶವಿಲ್ಲ ಕೇಸ್ ಡೈರೀಸ್ ತರಿಸಿದಾಕ್ಷಣಕ್ಕೇ ಎಂಬುದನ್ನು ಈ ಸಮಯಲ್ಲಿ ಹೇಳಿದರೆ ಸಾಕು. ಇನ್‌ವೆಸ್ಟಿಗೇಷನ್‌ನಲ್ಲಿ ಇಂಟರ್‌ಫಿಯರ್ ಆಗತಕ್ಕದ್ದು ರೂಢಿಯಲ್ಲಿಲ್ಲ ಎಂಬುದನ್ನು ಈ ಸಮಯದಲ್ಲಿ ಹೇಳುತ್ತೇನೆ ಮತ್ತು ಯಾವುದೋ ಸೀಕ್ರೆಟ್ ಸರ್ವಿಸ್ ವಿಚಾರ ಹೇಳಿದರು, ನನಗೆ ಅದು ಹೊಸ ವಿಷಯ. ಆ ರೀತಿಯಾಗಿ ಇದೆ ಎಂದು ಈ ದಿವಸ ನನ್ನ ಗಮನಕ್ಕೆ ತಂದಿದ್ದಾರೆ. ಗಮನಕ್ಕೆ ತಂದಾಗ ವಿಚಾರಣೆ ಮಾಡಬೇಕಾದದ್ದು ನನ್ನ ಕರ್ತವ್ಯ. ವಿಚಾರಣೆ ಮಾಡುತ್ತೇನೆ.

ಜನರಲ್ ಆಗಿ ಸರ್ಕಾರಕ್ಕೂ ಮತ್ತು ಪೋಲೀಸ್ ಇಲಾಖೆಯ Head of the Department ಗೂ ಏನೋ ಒಂದು ಭಿನ್ನಾಭಿಪ್ರಾಯ ಬಂದು ಬಿಟ್ಟಿದೆ ಎಂದು ಹೇಳಿ ಅದನ್ನೇ ಬೆಳೆಸುತ್ತಾ ಬಹಿರಂಗವಾಗಿ ಮಾತನಾಡತಕ್ಕದ್ದು—ಏನೇ ಕಾರಣವಿರಲಿ—ಆಡಳಿತ ದೃಷ್ಟಿಯಿಂದ ಒಳ್ಳೆಯದಲ್ಲ ಎಂಬುದನ್ನು ಈ ಸಮಯದಲ್ಲಿ ಹೇಳುತ್ತೇನೆ. ಮೊಗಮ್ಮಾಗಿ ಮುನುಕನೊಳಗೆ ಹೇಳತಕ್ಕ ವಾದಕ್ಕೆ ಯಾವ ಶ್ರೇಷ್ಠತೆಯೂ ದೊರೆಯುವುದಿಲ್ಲ. ಸರ್ಕಾರದ ದೃಷ್ಟಿಯಲ್ಲಿ ಹೇಳಬೇಕಾದರೆ ಯಾವ ಅಧಿಕಾರಿಯ ವಿಚಾರದಲ್ಲೂ ಸಹ ನಮಗೆ ಯಾವ ದುರಭಿಪ್ರಾಯವೂ ಇಲ್ಲ. ಯಾವ ಅಧಿಕಾರಿಯ ವಿಚಾರದಲ್ಲೂ ನಮಗೆ ಯಾವರೀತಿಯಾದ ದ್ವೇಷಾಸೂಯೆ, ಹೊಟ್ಟೆಕಿಚ್ಚೂಕೂಡ ಇಲ್ಲ, ಮುಖ್ಯವಾಗಿ ನಮಗೆ ಬೇಕಾದದ್ದು ಆಡಳಿತ ಸುಗಮವಾಗಿ ನಡೆಯಬೇಕು. ಯಾವ ಅಧಿಕಾರಿಯೇ ಆಗಲಿ, ಪೋಲೀಸ್ ಅಧಿಕಾರಿಯಾಗಲಿ, ಇನ್ನಾವ ಅಧಿಕಾರಿಯೇ ಆಗಲಿ ಸರ್ಕಾರದ ಆಡಳಿತ ದೃಷ್ಟಿಯಿಂದ ಸರ್ಕಾರದ ಆಡಳಿತದ ಒಂದು ನೀತಿಗನುಸಾರವಾಗಿ ನಡೆಯಬೇಕಾದದ್ದು ಮುಖ್ಯ ಎಂಬುದನ್ನು ನಾವು ಮರೆಯಬಾರದು. ಇವೊತ್ತಿನ ದಿವಸ ಈ ಮಂತ್ರಿಮಂಡಲ ಇರಬಹುದು, ನಾಳೆಯ ದಿವಸ ಇನ್ನೊಂದು ಮಂತ್ರಿ ಮಂಡಲ ಇರಬಹುದು. ಮಂತ್ರಿ ಮಂಡಲ ಸರಿಯಾಗಿ ನಡೆಯಬೇಕಾದರೆ, ಸರ್ಕಾರಕ್ಕೆ ವಿಧೇಯತೆಯಿಂದ ನಡೆದುಕೊಳ್ಳಬೇಕಾದ್ದು ಎಲ್ಲ ಅಧಿಕಾರಿಗಳ ಮುಖ್ಯ ಕರ್ತವ್ಯ ಎಂಬುದನ್ನು ನಾವು ಗಮನದಲ್ಲಟ್ಟುಕೊಳ್ಳಬೇಕು. ಆ ರೀತಿಯಾದ ಒಂದು ಭಿನ್ನಾಭಿಪ್ರಾಯ ಹೊರಗೆಡವಲಕ್ಕೆ ಅವಕಾಶವಿಲ್ಲ. ಈ ರೀತಿ ಭಿನ್ನಾಭಿಪ್ರಾಯ ಇದೆ ಎಂದ ಹೇಳಿ ಜನಗಳ ಮನಸ್ಸಿನಮೇಲೆ ಒಂದು ಪರಿಣಾಮ ಮಾಡತಕ್ಕದ್ದು ಸರಿಯಲ್ಲ ಎಂಬುದನ್ನು ಈ ಸಮಯದಲ್ಲಿ ಸವಿನಯದಿಂದ ಸೂಚನೆಮಾಡಬೇಕಾಗಿದೆ. ಆಡಳಿತದಲ್ಲಿ ಏನಾದರೂ ತೊಡಕು ಬಂದರೆ ಸರ್ಕಾರದಮೇಲೆ ಜವಾಬ್ದಾರಿ ಇದೆ. ಆ ದೃಷ್ಟಿಯಿಂದ ಸರ್ಕಾರ ತನ್ನ ಕರ್ತವ್ಯವನ್ನು ಮಾಡುತ್ತಿದೆ. ತನ್ನ ಕರ್ತವ್ಯ ಸರ್ಕಾರ ಮಾಡುವುದರಲ್ಲಿ ಏನಾದರೂ ನ್ಯೂನತೆ ಕಂಡು ಬಂದರೆ ಸರ್ಕಾರ ಅದಕ್ಕೆ ಕಾರಣವಾಗುತ್ತದೆ. ಅದನ್ನು ಸರ್ಕಾರ ಚೆನ್ನಾಗಿ ಮನಗಂಡಿದೆ. ಸರ್ಕಾರ ಆ ದೃಷ್ಟಿಯಿಂದ ಆಡಳಿತ ನಡೆಸುತ್ತದೆ ಎಂಬುದನ್ನು ಹೇಳಿ, ಈ ಸಮಯದಲ್ಲಿ ಇಷ್ಟು ಮಾತ್ರ ಹೇಳಿದರೆ ಸಾಕು ಎಂದು ಕಾಣುತ್ತದೆ.

12-30 P.M.

ಅನೇಕ ಮಾನ್ಯ ಸದಸ್ಯರು ಪೋಲೀಸ್ ಕಾರ್ಖಾನೆಗೆ ಬಲ್ಲುಗಳ ಸಂಬಳದ ವಿಚಾರದಲ್ಲಿ ಕೆಲವು ಮಾತನ್ನು ಹೇಳಿದರು. ಪೋಲೀಸು ಕಾರ್ಖಾನೆಬಲ್ಲುಗಳ ಸಂಬಳವನ್ನು ಬೊಂಬಾಯಿನಲ್ಲಿರುವ ರೀತಿಯಲ್ಲಿ ಹೆಚ್ಚಿಸಬೇಕಾದರೆ 16 ಲಕ್ಷ ರೂಪಾಯಿಗಳು ಹೆಚ್ಚಾಗಿ ಖರ್ಚಾಗುತ್ತವೆ. ಇಷ್ಟು ಖರ್ಚಾಗುವಾಗ ನೀವು ಹೆಚ್ಚು ಹಣಕೊಡಬೇಕು, ಕೊಟ್ಟರೆ ಆಗಬಹುದು. ತಾವು ಮಂಜೂರುಮಾಡಿ, ಈ ದಿವಸ ನಾವು ತಾವು ಹೇಳಿದ ಸಂಬಳ ಕೊಡುವುದಕ್ಕೆ ತಯಾರಾಗಿದ್ದೇವೆ. ಇಲ್ಲದಿದ್ದರೆ 3 ಸಾವಿರ ಜನ ಕಾರ್ಖಾನೆಬಲ್ಲುಗಳನ್ನು ನಾವು

(ಶ್ರೀ ಹೆಚ್. ಸಿದ್ದವೀರಪ್ಪ.)

ಮನೆಗೆ ಕಳುಹಿಸಬೇಕಾಗುತ್ತದೆ. ಅವರಿಗೆ ಚೈತ್ರ ನಿಂಗ್ ನಹ ಕೊಡುತ್ತಿದ್ದೇವೆ. ಕೆಲವು ಮಾನ್ಯ ಸದಸ್ಯರು ಪೊಪ್ಯೂಸಿಲ್ ಅಧಿಕಾರಿಗಳನ್ನು ಡಿಸ್ಮಿಸ್ ಲೆವರ್‌ಗೆ ತರಬೇಕೆಂದು, ಅದರಿಂದ ಅನುಕೂಲವೆಂದೂ ಹೇಳಿದ್ದಾರೆ. ಅದನ್ನು ಗಮನಿಸುತ್ತೇವೆ. ಪೋಲೀಸಿನವರು ಹೆಚ್ಚಾಗಿ ತಾವು ಹೇಳಿದಹಾಗೆ ಪಾರ್ಟಿ ಪಕ್ಷಗಳಿಗೆ ಸಂಬಂಧಪಟ್ಟಿಲ್ಲ. ಆ ದೃಷ್ಟಿಯಿಂದ ನಾವು ಮುಂದುವರಿಯಬೇಕು. ಇಷ್ಟು ಹೇಳಿ ಈ ಡಿಮ್ಯಾಂಡನ್ನು ಮಂಜೂರು ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

Mr. SPEAKER.—I would like to make a note on this occasion. While some allegations are made against some officers, it is my duty, I feel, to draw the attention of the Hon'ble Members as to how these allegations are to be made. Before allegations are made against officers who are not in the House to defend themselves, the practice is for the member to bring the allegations to the notice of the Government, privately, and, only where Government do not take satisfactory action, then to refer to them on the floor of the House. Otherwise, officers who cannot defend themselves will be subjected to unfair and avoidable accusations. It is the Minister who has to take responsibility for actions of the services. Where Government have not taken action on the complaint by the member and the member desires to refer to this subject on the floor of the House, it is also the practice to give notice beforehand to the Minister who may collect information and defend the officer, if necessary.

Now, the question is :

"That a sum not exceeding Rs. 1,19,80,500 be granted to the Government to defray the charges which will come in course of payment during the year ending 31st day of March 1955, in respect of 'Police.'"

The motion was adopted.

Mr. SPEAKER.—The House will now rise for the day to meet on Monday at 5-30 P.M. There will be no question and answer on that day. Hon'ble Members know that there will be elections to the Council between 9 A.M. and 5 P.M.

The House adjourned at Thirty-five Minutes past Twelve of the Clock to meet at 5-30 p.m. on Monday, 22nd March 1954

WD 1581—GPB—550—15-10-54